ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023


ಶನಿವಾರ, ಏಪ್ರಿಲ್ 20, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 339 RNI : 27369/75

janathavani@mac.com
www.janathavani.com
08192 254736 91642 99999












# ರಾಷ್ಟ್ರಪತಿ ಆಡಳಿತ ಹೇರಲು ಹುನ್ನಾರ : ಡಿಕೆಶಿ ಆರೋಪ



ಬೆಂಗಳೂರು, ಏ. 19 - ಕಾನೂನು-ಸುವ್ಯವಸ್ಥೆ ನೆಪದಲ್ಲಿ ಕರ್ನಾಟಕದ ಮೇಲೆ ರಾಷ್ಟ್ರಪತಿ ಆಡಳಿತ ಹೇರಲು ಹುನ್ನಾರ ನಡೆದಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಧಾನಸಭೆಯಲ್ಲಿನ ವಿರೋಧ ಪಕ್ಷದ ನಾಯಕ ಆರ್. ಅಶೋಕ ಮತ್ತು ಬಿಜೆಪಿಯವರು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂಬ ನಾಟಕ ಆಡುತ್ತಿದ್ದು, ರಾಜ್ಯ ಸರ್ಕಾರದ ಮೇಲೆ ಗೂಬೆ ಕೂರಿಸುವ ಕೆಲಸ ಮಾಡುತ್ತಿದ್ದಾರೆ ಎಂದರು.

ರಾಜ್ಯದಲ್ಲಿ ಕಾನೂನು-ಸುವ್ಯವಸ್ಥೆ ಸರಿಯಾಗಿದೆ, ನಮ್ಮ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸರಿ ಇದ್ದಷ್ಟು ಈ ದೇಶದ ಯಾವ ರಾಜ್ಯದಲ್ಲೂ ಇಲ್ಲ ಎಂದರು.

ಹುಬ್ಬಳ್ಳಿ ಕೊಲೆ ಪ್ರಕರಣ ಮುಂದಿಟ್ಟುಕೊಂಡು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದಕ್ಕೆ ಇದೇ ಕಾರಣ ಎನ್ನುತ್ತಿದ್ದಾರೆ, ಘಟನೆ ಸಂಬಂಧ ನಿಷ್ಪಕ್ಷಪಾತ ತನಿಖೆ ಕೈಗೊಂಡು ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು. ಕರ್ನಾಟಕ ಬಿಹಾರ ಆಗುತ್ತದೆ ಎಂಬ ಹೇಳಿಕೆಗೆ ಸಂಬಂಧಿಸಿದಂತೆ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಡಳಿತಾವಧಿಯಲ್ಲೂ ರಾಜ್ಯದಲ್ಲಿ ಅನೇಕ ದುಷ್ಕೃತ್ಯಗಳು ನಡೆದಿದ್ದವು, ವೈಯಕ್ತಿಕ ಕಾರಣಗಳಿಗೆ ಇಂತಹ ಘಟನೆಗಳು ನಡೆಯುತ್ತಿರುತ್ತವೆ, ರಾಜ್ಯದ ಕಾನೂನು-ಸುವ್ಯವಸ್ಥೆ ಹದಗೆಟ್ಟಿಲ್ಲ, ಪೊಲೀಸರ ಕಾರ್ಯದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ ಎಂದರು.

## ಕೊಕ್ಕನೂರು : ವೈಭವದ ರಥೋತ್ಸವ



ಮಲೇಬೆನ್ನೂರು, ಏ. 19 - ಸುಕ್ಷೇತ್ರ ಕೊಕ್ಕನೂರು ಗ್ರಾಮದ ಆರಾಧ್ಯ ದೈವ ಶ್ರೀ ಆಂಜನೇಯ ಸ್ವಾಮಿಯ ಮಹಾರಥೋತ್ಸವವು ಗುರುವಾರ ಬೆಳಗಿನ ಜಾವ ಅಪಾರ ಭಕ್ತರ ಸಮ್ಮುಖದಲ್ಲಿ ವೈಭವದೊಂದಿಗೆ ಜರುಗಿತು.

ಗ್ರಾಮ ದೇವತೆ ದುರ್ಗಾಂಬ, ಗಲ್ಲೆ, ದುರ್ಗವ್ವ, ದೊಣ್ಣೆ ಕೆಂಚವ್ವ, ಭೂತಪ್ಪ ಮತ್ತು ಜಿ.ಟಿ. ಕಟ್ಟೆ ಹಾಗೂ ಕೊಮಾರನಹಳ್ಳಿ ಗ್ರಾಮಗಳ ಬೀರ ದೇವರುಗಳ ಸಾನ್ನಿಧ್ಯದಲ್ಲಿ ಜರುಗಿದ ರಥೋತ್ಸವಕ್ಕೆ ವಿವಿಧ ಕಲಾ-ಮೇಳಗಳು ಮೆರಗು ತಂದವು. ಸಂಜೆ ಓಕಳಿ ಮತ್ತು ರಾತ್ರಿ ಡೊಳ್ಳು ಮೇಳ ಹಾಗೂ ತೈಲಾದಿಗಳಿಂದ ಧೂಪ ಹಾಕಲಾಯಿತು.

ಶುಕ್ರವಾರ ಬೆಳಿಗ್ಗೆ 9 ಗಂಟೆಯಿಂದ ಶ್ರೀ ಆಂಜನೇಯ ಸ್ವಾಮಿಯ ಶ್ರೀ ದುರ್ಗಾಂಬ, ಶ್ರೀ ಮಾತಂಗ್ಯಮ್ಮ, ಶ್ರೀ ಬೀರದೇವರೊಂದಿಗೆ ಗ್ರಾಮದ ಎಲ್ಲಾ ಮನೆಗಳಿಗೆ ಸಂದರ್ಶನ ನೀಡಲಿದೆ.

WANTED/ಕೆಲಸಕ್ಕೆ ಬೇಕಾಗಿದ್ದಾರೆ
Wholesale ಔಷಧಿ ಅಂಗಡಿಗೆ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ.
Qualification : (SSSLC, PUC) English ಓದಲು ಬರಬೇಕು
Address : ಎ.ಕೆ. ಫಾರ್ಮ, ಹದಡಿ ರೋಡ್,
ತರಳಬಾಳು ಸ್ಕೂಲ್ ಎದುರು, ಶ್ರೀನಿವಾಸ ನಗರ, ದಾವಣಗೆರೆ.
ಫೋ : 88678 56784, 99643 75596

St. Mary's Convent School & P.U. College for Science & Commerce
Vinobanagar, Davangere.
WANTED
Fluence in English with Minimum 5 years of Experience in Teaching
☛ B.Sc., - 10 ☛ B.Sc., B.Ed., M.Sc. -05 ☛ B.A., B.Ed, M.Ed. - 05 ☛ B.Sc., B.Ed., - 04 ☛ B.A., B.Ed., (History)- 03 ☛ B.A., B.Ed., Hndi - 03 ☛ P.E. - 03
Contact : 97435 16817, 97405 43160
Admission Open 2024-2025 from LKG to II PUC

## ಮೇಘಶ್ರೀ ನಿಧನ



ದಾವಣಗೆರೆ, ಎಂಸಿಸಿ ಬಿ ಬ್ಲಾಕ್, ಅಯ್ಯಪ್ಪ ಸ್ವಾಮಿ ದೇವಸ್ಥಾನ ಹಿಂಭಾಗದ ವಾಸಿ ಶಶಿ ಸೋಪ್ ಡಿಸ್ಟ್ರಿಬ್ಯೂಟರ್ಸ್ ಕುಮಾರಸ್ವಾಮಿ ಅವರ ಪುತ್ರ ಕೆ. ವೆಂಕಟೇಶ್ ಇವರ ಧರ್ಮಪತ್ನಿ

**ಮೇಘಶ್ರೀ**

ಇವರು ದಿನಾಂಕ 19.04.2024ರ ಶುಕ್ರವಾರ ಸಂಜೆ 7 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 20.04.2024ರ ಶನಿವಾರ ಮಧ್ಯಾಹ್ನ 12 ಕ್ಕೆ ನಗರದ ಆರ್. ಹೆಚ್. ಬೃಂದಾವನದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

ಮೊ : 94488 73703

# ಹರಪನಹಳ್ಳಿ ತಾ.ನಲ್ಲಿ ನರೇಗಾ ಕಾಮಗಾರಿಗಳನ್ನು ಪರಿಶೀಲಿಸಿದ ನರೇಗಾ ಕಮೀಷನರ್



ಹರಪನಹಳ್ಳಿ, ಏ.19- ತಾಲ್ಲೂಕಿನಲ್ಲಿ ನರೇಗಾದಡಿ ಕೈಗೆತ್ತಿಕೊಂಡ ಕಾಮಗಾರಿಗಳನ್ನು ಉತ್ತಮವಾಗಿ ನಿರ್ಮಿಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಇಲಾಖೆಯ ಆಯುಕ್ತ ಪವನ್ ಕುಮಾರ್ ಮಾಲಪಾಟಿ ಹೇಳಿದರು.

ತಾಲ್ಲೂಕಿನ ಬೆಣ್ಣಿಹಳ್ಳಿ ಹಾಗೂ ಮೈದೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ನರೇಗಾದಡಿ ಅಭಿವೃದ್ಧಿಪಡಿಸಿದ ಕಾಮಗಾರಿಗಳ ಸ್ಥಳಕ್ಕೆ ಶುಕ್ರವಾರ ಭೇಟಿ ನೀಡಿ ಪರಿಶೀಲಿಸಿ ಅವರು ಮಾತನಾಡಿದರು.

ಶಾಲಾ ಶೌಚಾಲಯ ಕಾಮಗಾರಿಗಳನ್ನು ಉತ್ತಮವಾಗಿ ನಿರ್ಮಿಸಲಾಗಿದೆ.

ಅಡುಗೆ ಕೋಣೆ, ಕಾಂಪೌಂಡ್ ಸೇರಿದಂತೆ ಇತರೆ ಕಾಮಗಾರಿಗಳು ಗುಣಮಟ್ಟದಿಂದ ಕೂಡಿವೆ. ಆದರೆ, ಕಾಮಗಾರಿಗಳ ಕಡತಗಳನ್ನೂ ಸಹ ಅದೇ ರೀತಿ ಉತ್ತಮವಾಗಿ ನಿರ್ವಹಿಸಿರಬೇಕು ಎಂದು ತಾಂತ್ರಿಕ ಸಹಾಯಕರಿಗೆ ಸೂಚನೆ ನೀಡಿದರು.

ಬೆಣ್ಣಿಹಳ್ಳಿ ತಾಲ್ಲೂಕಿನ ನಿಲುವಂಜಿ ಗ್ರಾಮದ ಶ್ರೀಮತಿ ರುದ್ರಾಂಬ ಎಂ.ಪಿ.ಪ್ರಕಾಶ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹೈಟೆಕ್ ಶೌಚಾಲಯ ಹಾಗೂ ಕಾಂಪೌಂಡ್ ನಿರ್ಮಾಣ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿದ ಆಯುಕ್ತರು, ಇನ್ನೂ ಇದೇ ಶಾಲೆಯಲ್ಲಿ ಬೇರೆ ಬೇರೆ ಕಾಮಗಾರಿ ತೆಗೆದುಕೊಳ್ಳಿ, ಶಾಲಾ ಮೈದಾನ ಅಭಿವೃದ್ಧಿ, ಪೌಷ್ಟಿಕ ಕೈತೋಟ, ವಿವಿಧ ಕ್ರೀಡೆಯ ಅಂಕಣಗಳ ಅಭಿವೃದ್ಧಿಪಡಿಸಬಹುದು. ಆದರೆ, ಮೈದಾನದ ಅಭಿವೃದ್ಧಿ ವೇಳೆ ಗಿಡಗಳನ್ನು ಕಡಿಯದಂತೆ ಎಚ್ಚರ ವಹಿಸಿ ಎಂದು ತಿಳಿಸಿದರು.

ಮೈದೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೈದೂರು ಗ್ರಾಮದ ಗುರುಲಿಂಗನಗೌಡ ಎಂಬುವವರು ಅಭಿವೃದ್ಧಿಪಡಿಸಿಕೊಂಡ ದಾಳಿಂಬೆ ತೋಟ, ಕೆಂಚಮ್ಮ ಎಂಬುವವರು ಅಭಿವೃದ್ಧಿಪಡಿಸಿದ ಪಪ್ಪಾಯ ತೋಟವನ್ನು ವೀಕ್ಷಣೆ ಮಾಡಿದ ಆಯುಕ್ತರು, ನರೇಗಾದಡಿ ವೈಯಕ್ತಿಕ ಯೋಜನೆಯಡಿ ತೋಟಗಾರಿಕೆ ಸೇರಿದಂತೆ ಇತರೆ ಕಾಮಗಾರಿಗಳಲ್ಲಿ ಫಲಾನುಭವಿಗಳೂ ಸಹ ನರೇಗಾದಡಿ ಅಕುಶಲ ಕೂಲಿ ಕೆಲಸ ಮಾಡಬೇಕು. ಇದರಿಂದ ಮಾನವ ದಿನಗಳ ಹೆಚ್ಚೆಚ್ಚು ಸೃಜನೆಯಾಗುತ್ತವೆ. ಇದರ ಜೊತೆಗೆ ಮತ್ತಷ್ಟು ವೈಯಕ್ತಿಕ ಹಾಗೂ ಸಮುದಾಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ನೆರವಾಗುತ್ತದೆ ಎಂದು ಸಲಹೆ ನೀಡಿದರು.

ಮೈದೂರು ಗ್ರಾ.ಪಂ ವ್ಯಾಪ್ತಿಯ ಬಳಿಗಾನೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಡುಗೆ ಕೋಣೆ ಹಾಗೂ ಭೋಜನಾಲಯ, ಕೆಸರಹಳ್ಳಿ ಗ್ರಾಮದ ಸ.ಹಿ.ಪ್ರಾ ಶಾಲೆಯಲ್ಲಿ ನರೇಗಾದಡಿ ನಿರ್ಮಿಸಿದ ಶೌಚಾಲಯ, ಕಾಂಪೌಂಡ್ ವೀಕ್ಷಣೆ ಮಾಡಿ ಸ್ಥಳದಲ್ಲೇ ಕಾಮಗಾರಿ ಕಡತ ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬಿ.ಸದಾಶಿವ ಪ್ರಭು, ಉಪ ಕಾರ್ಯದರ್ಶಿ ಭೀಮಪ್ಪ ಲಾಳಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದ ಜಂಟಿ ನಿರ್ದೇಶಕ (ತಾಂತ್ರಿಕ) ರಾದ ವೇಣುಗೋಪಾಲ್ ರಾವ್, ರಾಜ್ಯ ನರೇಗಾ ಸಹಾಯಕ ನಿರ್ದೇಶಕ ಸಂಜೀವಕುಮಾರ್, ಯೋಜನಾ ಅಭಿಯಂತರರಾದ ಅಭಿರಾಮ್, ಜಿಐಎಸ್ ಸಂಯೋಜಕ ಆದರ್ಶ್, ಕಾರ್ಯನಿರ್ವಾಹಕ ಅಧಿಕಾರಿ ವೈ.ಹೆಚ್.ಚಂದ್ರಶೇಖರ್, ಸಹಾಯಕ ನಿರ್ದೇಶಕ (ಗ್ರಾ.ಉ.) ಯು.ಹೆಚ್.ಸೋಮಶೇಖರ್, ಎಡಿಪಿಸಿ ಬಸವರಾಜ್, ತಾಂತ್ರಿಕ ಸಂಯೋಜಕ ನಾಗರಾಜ ನಾಯ್ಕ, ಐಇಸಿ ಸಂಯೋಜಕ ಕೆ.ವಸಿಗೇರಪ್ಪ ಚಾಗನೂರು, ತಾಂತ್ರಿಕ ಸಹಾಯಕರಾದ ಲೋಕೇಶ್ ನಾಯ್ಕ, ರವಿ ಹಲಗೇರಿ ಇಲಾಖೆ ಅನುಷ್ಠಾನ ಅಧಿಕಾರಿಗಳು, ತಾ.ಪಂ, ಗ್ರಾ.ಪಂ ಸಿಬ್ಬಂದಿ ಇದ್ದರು.

## ವಿಜ್ಞಾನ ಶಕ್ತಿ ಕೇಂದ್ರವಾಗುವತ್ತ ಭಾರತದ ಹೆಜ್ಜೆ : ನೇಚರ್

ನವದೆಹಲಿ, ಏ. 19 – ಭಾರತ ಆರ್ಥಿಕ ಶಕ್ತಿಯಾಗುತ್ತಿರುವ ಜೊತೆಗೆ, ವಿಜ್ಞಾನ ಶಕ್ತಿ ಕೇಂದ್ರವಾಗುವತ್ತ ಒಂದು ಹೆಜ್ಜೆ ಮುಂದಿದೆ ಎಂದು 'ನೇಚರ್' ನಿಯತಕಾಲಿಕ ವರದಿ ಮಾಡಿದೆ.

ಭಾರತದ ವೈಜ್ಞಾನಿಕ ಬೆಳವಣಿಗೆ ಕುರಿತು ಲೇಖನವೊಂದನ್ನು ಬರೆದಿರುವ ಬ್ರಿಟನ್‌ನ ಪ್ರತಿಷ್ಠಿತ ವಾರಪತ್ರಿಕೆಯಾದ ನೇಚರ್, ಭಾರತ ಸಂಶೋಧನೆಗೆ ಇನ್ನಷ್ಟು ಉತ್ತೇಜನ ನೀಡಬೇಕು, ಖಾಸಗಿ ವಲಯದಿಂದ ವಿಶೇಷವಾಗಿ ಹೂಡಿಕೆ ಬರಬೇಕು ಎಂದು ತಿಳಿಸಿದೆ. ಈ ಹಿಂದಿನ ಸರ್ಕಾರಗಳು ಮೂಲಭೂತ ಸಂಶೋಧನೆಯನ್ನು ಕಡೆಗಣಿಸಿದ್ದವು. ಉತ್ತಮ ಸಂಶೋಧನಾ ವ್ಯವಸ್ಥೆಗಾಗಿ ಹೆಚ್ಚಿನ ಸ್ವಾಯತ್ತತೆಯ ಅಗತ್ಯವಿದೆ ಎಂದೂ ಲೇಖನದಲ್ಲಿ ತಿಳಿಸಲಾಗಿದೆ.

ಭಾರತ ಈಗ ವಿಜ್ಞಾನದ ಶಕ್ತಿ ಕೇಂದ್ರವಾಗುವತ್ತ ಹೆಜ್ಜೆ ಹಾಕಿದೆ. ಆ ಹಂತ ಇನ್ನೂ ಬಂದಿಲ್ಲವಾದರೂ, ಬರಬಹುದಾಗಿದೆ ಎಂದು ಲೇಖನದಲ್ಲಿ ತಿಳಿಸಿರುವ ಜೊತೆಗೆ, ಭಾರತ ಔಷಧ ಉದ್ಯಮದಲ್ಲಿ ಮೂರನೇ ಸ್ಥಾನದಲ್ಲಿರುವುದನ್ನೂ ಪ್ರಸ್ತಾಪಿಸಲಾಗಿದೆ. ಅಮೆರಿಕ ಹಾಗೂ ಚೀನಾಗಳ ನಂತರ ಸಂಶೋಧನೆಯಲ್ಲಿ ಭಾರತ 3ನೇ ಸ್ಥಾನದಲ್ಲಿರುವುದನ್ನೂ ಗುರುತಿಸಲಾಗಿದೆ. 2014-2021ರ ನಡುವೆ ದೇಶದಲ್ಲಿ ವಿಶ್ವವಿದ್ಯಾಲಯಗಳ ಸಂಖ್ಯೆ 760 ರಿಂದ 1,113ಕ್ಕೆ ಹೆಚ್ಚಾಗಿದೆ. ಕಳೆದ ದಶಕದಲ್ಲಿ ಏಳು ಹೊಸ ಐ.ಐ.ಟಿ.ಗಳು ಸ್ಥಾಪನೆಯಾಗಿವೆ. ಹೊಸ ವಿಜ್ಞಾನ ಶಿಕ್ಷಣ ಹಾಗೂ ಸಂಶೋಧನಾ ಕೇಂದ್ರಗಳು ಸ್ಥಾಪನೆಯಾಗಿವೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

# ಅಂಬೇಡ್ಕರ್ ತತ್ವಾದರ್ಶಗಳನ್ನು ನಾವೆಲ್ಲರೂ ಅಳಡಿಸಿಕೊಳ್ಳಬೇಕು

**ಜಗಳೂರಿನ ಕಾರ್ಯಕ್ರಮದಲ್ಲಿ ಶಾಸಕ ದೇವೇಂದ್ರಪ್ಪ**



ಜಗಳೂರು, ಏ.19- ಡಾ.ಬಿ.ಆರ್. ಅಂಬೇಡ್ಕರ್ ಅವರು ರಚಿಸಿದ ಸಂವಿಧಾನದಿಂದಲೇ ಸರ್ವರಿಗೂ ಸಮಪಾಲು, ಸಮಬಾಳು ತತ್ವದಡಿ ಸೌಲಭ್ಯಗಳು ದೊರೆಯುವಂತಾಗಿದೆ. ಅಂಬೇಡ್ಕರ್‌ರವರ ತತ್ವಾದರ್ಶಗಳನ್ನು ನಾವೆಲ್ಲರೂ ಸಹ ಅಳಡಿಸಿಕೊಳ್ಳಬೇಕಾಗಿದೆ ಎಂದು ಶಾಸಕ ಬಿ.ದೇವೇಂದ್ರಪ್ಪ ತಿಳಿಸಿದರು.

ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿ ದಲಿತ ಸಂಘರ್ಷ ಸಮಿತಿ ವತಿಯಿಂದ ಏರ್ಪಡಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ಜಾತ್ಯತೀತ ರಾಷ್ಟ್ರವಾದ ಭಾರತಕ್ಕೆ ವಿಶ್ವಕ್ಕೇ ಮಾದರಿಯಾಗುವಂತಹ ಸಂವಿಧಾನವನ್ನು ರಚಿಸಿದ ಕೀರ್ತಿ ಡಾ. ಬಿ.ಆರ್. ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ ಎಂದರು.

ಇದೇ ಸಂದರ್ಭದಲ್ಲಿ ಜಗಳೂರು ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿ ಇರುವ ಡಾ. ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಶಾಸಕರು ಹಾಗೂ ದಲಿತ ಸಂಘಟನೆ ಮುಖಂಡರು ಪುಷ್ಪ ನಮನ ಸಲ್ಲಿಸುವ ಮೂಲಕ, ಗೌರವ ಸಮರ್ಪಣೆ ಸಲ್ಲಿಸಿದರು.

ಕೆಪಿಸಿಸಿ ಎಸ್ಸಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ.ಪಾಲಯ್ಯ ಮಾತನಾಡಿ, ಭಾರತದಲ್ಲಿ ಅಸ್ಪೃಶ್ಯತೆ ನಿವಾರಣೆಯಾಗಬೇಕು. ಜನಸಾಮಾನ್ಯರಿಗೆ ಮೂಲಭೂತ ಕರ್ತವ್ಯ, ಸಮಾನತೆ ಶಿಕ್ಷಣ ಕ್ಷೇತ್ರ ಸೇರಿದಂತೆ ಹಲವಾರು ಕ್ಷೇತ್ರಗಳಲ್ಲಿ ಅವರು ನೀಡಿದ ಕೊಡುಗೆಯನ್ನು ಸ್ಮರಿಸಲು ಪ್ರತಿ ವರ್ಷವೂ ಅಂಬೇಡ್ಕರ್ ಜಯಂತಿಯನ್ನು ಶಾಲಾ - ಕಾಲೇಜುಗಳು, ಸರ್ಕಾರಿ, ಖಾಸಗಿ ಕಚೇರಿಗಳಲ್ಲಿ ಆಚರಣೆ ಮಾಡಲಾಗುತ್ತದೆ ಎಂದರು.

ದಲಿತ ಮುಖಂಡ ಶಂಭುಲಿಂಗಪ್ಪ ಮಾತನಾಡಿ, ಅಂಬೇಡ್ಕರ್ ಅಂದಿನ ಪರಿಸ್ಥಿತಿಯಲ್ಲಿ ಅವರು ಪಟ್ಟ ನೋವು, ಕಷ್ಟ, ವೇದನೆ ಯಾರೂ ಕೂಡ ಅನುಭವಿಸಿಲ್ಲ. ಆದ್ದರಿಂದ ಅವರ ಶ್ರಮದ ಅರಿವು ಎಲ್ಲರಿಗೂ ಕೂಡ ತಿಳುವಳಿಕೆಯಾಗಬೇಕಾಗಿದೆ. ಜೀವನದ ಆರಂಭದಿಂದ ಮರಣದವರೆಗೂ ಅವಮಾನ ಅನುಭವಿಸಿ, ಜನರಿಗೆ ಸುಖ, ಶಾಂತಿ ಕೊಟ್ಟ ಮಹಾನ್ ತ್ಯಾಗಿಯಾಗಿದ್ದಾರೆ ಎಂದು ಸ್ಮರಿಸಿದರು.

ಈ ಸಂದರ್ಭದಲ್ಲಿ ನಿವೃತ್ತ ಸಮಾಜ ಕಲ್ಯಾಣ ಅಧಿಕಾರಿ ಬಿ. ಮಹೇಶ್ವರಪ್ಪ, ಸಿ.ತಿಪ್ಪೇಸ್ವಾಮಿ, ಗ್ಯಾಸ್ ಓಬಣ್ಣ, ಮಾಯಣ್ಣ, ಹಟ್ಟಿ ತಿಪ್ಪೇಸ್ವಾಮಿ, ಚಿತ್ತಪ್ಪ, ಇಕ್ಬಾಲ್ ಅಹಮದ್, ಪಾಪಣ್ಣ, ಕುರಿ ಜಯಣ್ಣ, ತಾನಾಜಿ ಗೋಸಾಯಿ, ಪಲ್ಲಾಗಟ್ಟೆ ಶೇಖರಪ್ಪ, ಶಿವಣ್ಣ, ವಿಜಯ್, ಮಾರುತಿ, ಮಹಮ್ಮದ್ ಗೌಸ್, ಹರೀಶ್ ರೆಡ್ಡಿ, ಹಾಲೇಶ್, ಪರಸಪ್ಪ, ಹನುಮಂತಪ್ಪ, ಕಾಟಪ್ಪ ಸೇರಿದಂತೆ, ದಲಿತ ಮುಖಂಡರು, ಸಾರ್ವಜನಿಕರು ಇದ್ದರು.

## ವ್ಯಭಿಚಾರಕ್ಕಾಗಿ ವಿಚ್ಛೇದನ ಪಡೆಯಬಹುದು, ಮಗುವಿನ ಸುಪರ್ದಿ ನಿರಾಕರಿಸಲಾಗದು : ಹೈಕೋರ್ಟ್

ಮುಂಬೈ, ಏ. 19 – ವ್ಯಭಿಚಾರದ ಕಾರಣಕ್ಕಾಗಿ ವಿಚ್ಛೇದನ ಪಡೆಯಬಹುದು. ಆದರೆ, ಈ ಕಾರಣಕ್ಕಾಗಿ ಮಗುವಿನ ಸುಪರ್ದಿ ನಿರಾಕರಿಸಲಾಗದು ಎಂದು ಬಾಂಬೆ ಹೈಕೋರ್ಟ್ ತಿಳಿಸಿದೆ.

ಒಂಭತ್ತು ವರ್ಷದ ಹೆಣ್ಣು ಮಗುವನ್ನು ತಾಯಿಯ ವಶಕ್ಕೆ ನೀಡುವಂತೆ ಆದೇಶಿಸುವಾಗ ಏಕಸದಸ್ಯ ಪೀಠದ ನ್ಯಾಯಮೂರ್ತಿ ರಾಜೇಶ್ ಪಾಟೀಲ್ ಈ ನಿಲುವು ತಳೆದಿದ್ದಾರೆ.

ಮಾಜಿ ಶಾಸಕರೊಬ್ಬರ ಮಗ ತನ್ನ ಒಂಭತ್ತು ವರ್ಷದ ಹೆಣ್ಣು ಮಗುವನ್ನು ತನಗೆ ವಹಿಸಬೇಕೆಂದು ಕೋರಿ ಕೌಟುಂಬಿಕ ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸಿದ್ದರು. ಆದರೆ, ಕೌಟುಂಬಿಕ ನ್ಯಾಯಾಲಯ ಅರ್ಜಿ ತಳ್ಳಿ ಹಾಕಿತ್ತು. ನಂತರ ಅವರು ಹೈಕೋರ್ಟ್ ಮೊರೆ ಹೋಗಿದ್ದರು.

2010ರಲ್ಲಿ ದಂಪತಿ ಮದುವೆಯಾಗಿದ್ದರು. 2015ರಲ್ಲಿ ಹೆಣ್ಣು ಮಗುವಿನ ಜನನವಾಗಿತ್ತು. ನಂತರ ದಂಪತಿ ನಡುವೆ ಕೌಟುಂಬಿಕ ಕಲಹ ಉಂಟಾಗಿತ್ತು.

ಈ ಬಗ್ಗೆ ಪತಿಯ ಪರವಾಗಿ ಅರ್ಜಿ ದಾಖಲಿಸಿದ್ದ ವಕೀಲೆ ಇಂದಿರಾ ಜೈಸಿಂಗ್, ಮಹಿಳೆ ಹಲವು ವಿವಾಹೇತರ ಸಂಬಂಧ ಹೊಂದಿದ್ದಾರೆ. ಈ ಸಂದರ್ಭದಲ್ಲಿ ಮಗುವನ್ನು ಕಸ್ಟಡಿಗೆ ನೀಡುವುದು ಸೂಕ್ತವಲ್ಲ ಎಂದರು.

ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪಾಟೀಲ್, ಉತ್ತಮ ಪತ್ನಿಯಾಗಿಲ್ಲ ಎಂಬ ಮಾತ್ರಕ್ಕೆ ಉತ್ತಮ ತಾಯಿಯಾಗುವುದಿಲ್ಲ ಎಂದು ಹೇಳಲಾಗದು. ವ್ಯಭಿಚಾರವು ವಿಚ್ಛೇದನಕ್ಕೆ ಆಧಾರವಾಗಬಹುದು. ಇದು ಮಗುವಿನ ಕಸ್ಟಡಿ ವಿಷಯದಲ್ಲಿ ನಿರ್ಧಾರಕ್ಕೆ ಆಧಾರವಾಗದು ಎಂದು ಹೇಳಿದರು.




## ಕೊಕ್ಕನೂರು ಹನುಮಪ್ಪನಿಗೆ ಭಕ್ತರಿಂದ ನೋಟಿನ ಹಾರ

ಮಲೇಬೆನ್ನೂರು, ಏ.19- ಮಳೆ - ಬೆಳೆ ಇಲ್ಲದೇ ಬರಗಾಲ ಎದುರಿಸುತ್ತಿರುವ ಕೊಕ್ಕನೂರಿನ ಗ್ರಾಮಸ್ಥರು ತಮ್ಮ ನೆಚ್ಚಿನ ಹನುಮಪ್ಪನಿಗೆ ನೋಟಿನ ಹಾರಗಳನ್ನು ಹಾಕುವ ಮೂಲಕ ಭಕ್ತಿಗೆ ಬರವಿಲ್ಲ ಎಂಬುದನ್ನು ಶುಕ್ರವಾರ ಸಾಬೀತು ಮಾಡಿದ್ದಾರೆ.

ಸುಕ್ಷೇತ್ರ ಕೊಕ್ಕನೂರು ಗ್ರಾಮದ ಆರಾಧ್ಯ ದೈವ ಶ್ರೀ ಆಂಜನೇಯ ಸ್ವಾಮಿಯ ರಥೋತ್ಸವದ ಅಂಗವಾಗಿ ಗ್ರಾಮದ ಪ್ರತಿ ಮನೆಗೂ ಸಂದರ್ಶನ ನೀಡುವ ಪದ್ಧತಿ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಹೀಗೆ ಮನೆಗಳಿಗೆ ಹೋಗುವಾಗ ಜನರು ರಸ್ತೆಗೆ ನೀರು ಹಾಕಿ ಬಹಳ ಭಕ್ತಿಯಿಂದ ಹನುಮಪ್ಪನಿಗೆ ಹಣ್ಣು - ಕಾಯಿ ಪೂಜೆ ಮಾಡಿಸಿ, ತಮ್ಮ ಕೈಲಾದಷ್ಟು ದುಡ್ಡನ್ನು ಕೊಡುತ್ತಾರೆ. ಬಹಳಷ್ಟು ಜನ ಹರಕೆ ರೂಪದಲ್ಲಿ ಹೊಸ ನೋಟಗಳನ್ನು ಹಾರ ಮಾಡಿ ಹಾಕುತ್ತಾರೆ. ಹನುಮಪ್ಪನಿಗೆ ಅಷ್ಟೇ ಅಲ್ಲದೇ ಗ್ರಾಮದೇವತೆ ದುರ್ಗಾಂಬ, ಮಾತಂಗ್ಯಮ್ಮ ಮತ್ತು ಜಿ.ಟಿ.ಕಟ್ಟೆ ಹಾಗೂ ಕೊಮಾರನಹಳ್ಳಿ ಬೀರಪ್ಪ ದೇವರುಗಳಿಗೂ ಜನ ಪೂಜೆ ಸಲ್ಲಿಸಿ, ಕಾಣಿಕೆ ಹಣ ನೀಡುತ್ತಾರೆ.

ಶುಕ್ರವಾರ ನಡೆದ ಗ್ರಾಮದ ಎಲ್ಲಾ ಮನೆಗಳಿಗೆ ದೇವರುಗಳ ಸಂದರ್ಶನದಲ್ಲಿ ಹನುಮಪ್ಪನ ಪಲ್ಲಕ್ಕಿಗೆ ಭಕ್ತರು ಹಾಕಿದ್ದ ಕಾಣಿಕೆ ಹಣ 12,63,199 ರೂ. ಸಂಗ್ರಹವಾಗಿದೆ.

## ಕೊಟ್ಟೂರೇಶ್ವರ ಸ್ವಾಮಿಯ ಹುಂಡಿ ಪೆಟ್ಟಿಗೆ ಎಣಿಕೆ ಮೊತ್ತ ರೂ. 47,90,920



ಕೊಟ್ಟೂರು, ಏ. 19 - ಪಟ್ಟಣದ ಆರಾಧ್ಯ ದೈವ, ಪವಾಡ ಪುರುಷ ಎಂದೇ ಪ್ರಖ್ಯಾತವಾಗಿರುವ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಯ ಹುಂಡಿ ಪೆಟ್ಟಿಗೆ ಎಣಿಕೆ ದೇವಸ್ಥಾನದ ಹಿಂಭಾಗದಲ್ಲಿ ಇರುವ ಸಭಾಂಗಣದಲ್ಲಿ ಪ್ರಾರಂಭಿಸಲಾಯಿತು. 6 ತಾತ್ಕಾಲಿಕ, 6 ದೊಡ್ಡ ಹುಂಡಿ ಪೆಟ್ಟಿಗೆ ಸೇರಿದಂತೆ ಒಟ್ಟು 12 ಹುಂಡಿ ಪೆಟ್ಟಿಗೆ ಎಣಿಕೆ ಮಾಡುತ್ತಿದ್ದಾರೆ ಎಂದು ದೇವಸ್ಥಾನದ ಕಾರ್ಯನಿರ್ವಣಾಧಿಕಾರಿ ಪಿ. ಶಾಂತಮ್ಮ ತಿಳಿಸಿದರು. ಶ್ರೀ ಗುರು ಬಸವೇಶ್ವರ ಸ್ವಾಮಿ ದೇವಸ್ಥಾನದ ಹುಂಡಿ ಎಣಿಕೆ ಮೊತ್ತ ರೂ 47,90,920 ಗಳು ಸಂಗ್ರಹಣೆ ಆಗಿರುತ್ತದೆ.

ಈ ಸಂದರ್ಭದಲ್ಲಿ ಹಣ ಎಣಿಕೆಯಲ್ಲಿ ಇಂದು ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಧರ್ಮಕರ್ತರಾದ ಶೇಖರಯ್ಯ, ಬ್ಯಾಂಕಿನ ಮ್ಯಾನೇಜರ್ ಶಿವರಾಜ್, ಅಧೀಕ್ಷಕರು ಭುವನೇಶ್ವರಿ, ಪ್ರದೀಪ್, ಕಾರ್ತಿಕ, ಸುರೇಶ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು

## ನಗರದ ಎಂಬಿಎ ಕಾಲೇಜಿನಲ್ಲಿಂದು ಪದವಿ ದಿನ

ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈಟೆಕ್ ಎಜುಕೇಷನ್ ಕಾಲೇಜಿನ ವಾಣಿಜ್ಯ ಇಲಾಖೆ ವತಿಯಿಂದ ಕಾಲೇಜಿನ ಎಂಬಿಎ ಆಡಿಟೋರಿಯಂನಲ್ಲಿ 2ನೇ ಪದವಿ ದಿನವನ್ನು ಇಂದು ಸಂಜೆ 4.30ಕ್ಕೆ ಹಮ್ಮಿಕೊಳ್ಳಲಾಗಿದೆ.

ಅಧ್ಯಕ್ಷತೆ : ಡಾ. ಅಥಣಿ ಎಸ್.ವೀರಣ್ಣ, ಮುಖ್ಯ ಅತಿಥಿ : ನಿರಂಜನ ಶೀಲವಂತ, ಉಪಸ್ಥಿತಿ : ಡಾ. ಬಿ.ವೀರಪ್ಪ ಹಾಗೂ ಕಾಲೇಜಿನ ನಿರ್ದೇಶಕ ಡಾ. ಹೆಚ್.ವಿ.ಸ್ವಾಮಿ ತ್ರಿಭುವಾನಂದ.

## ನೇಹಾ ಹತ್ಯೆ : ಜಂಗಮ ಸಮಾಜ ಖಂಡನೆ

ದಾವಣಗೆರೆ, ಏ.19- ಹುಬ್ಬಳ್ಳಿ - ಧಾರವಾಡ ಮಹಾನಗರ ಪಾಲಿಕೆ ಸದಸ್ಯ ನಿರಂಜನಯ್ಯ ಹಿರೇಮಠ ಅವರ ಪುತ್ರಿ ಕು. ನೇಹಾ ಅವರ ಹತ್ಯೆಯನ್ನು ಖಂಡಿಸಿರುವ ಜಿಲ್ಲಾ ಜಂಗಮ ಸಮಾಜ, ಆರೋಪಿ ವಿರುದ್ಧ ಕಠಿಣ ಕ್ರಮ ಜರುಗಿಸುವಂತೆ ಒತ್ತಾಯಿಸಿದೆ.

ಕಾಲೇಜಿನ ಆವರಣದಲ್ಲಿ ಹಾಡು ಹಗಲೇ ಬರ್ಬರವಾಗಿ ನೇಹ ಅವರ ಹತ್ಯೆ ಕ್ರೌರ್ಯವಾಗಿದ್ದು, ಇದು ಮಾನವೀಯತೆಯ ಕಗ್ಗೊಲೆಯಾಗಿದೆ ಎಂದು ಜಂಗಮ ಸಮಾಜದ ಮುಖಂಡರೂ ಆದ ಮಹಾನಗರ ಪಾಲಿಕೆ ಮಾಜಿ ಸದಸ್ಯ ಹೆಚ್.ಎಂ. ರುದ್ರಮುನಿಸ್ವಾಮಿ ಖಂಡಿಸಿದ್ದಾರೆ.

## ಪುರಸಭಾ ಕಾರ್ಯಾಲಯ

ಹರಪನಹಳ್ಳಿ, ವಿಜಯನಗರ ಜಿಲ್ಲೆ, ದೂರವಾಣಿ : 08398 280258
itstaff_ulb_harapanahalli@yashoo.com

ಕ್ರ.ಸಂ.ಪುಸಃ ಹಹಳ್ಳಿ:ಕಂ.ಶಾ/ಸಿಆರ್/ /2023-24, ದಿನಾಂಕ : 19.04.2024

### ಸಾರ್ವಜನಿಕ ಪ್ರಕಟಣೆ

ಈ ಕೆಳಕಂಡ 11ನೇ ವಾರ್ಡ್ ಶಿಲಾರಗೇರಿಯಲ್ಲಿ ಬರುವ ಷೆಡ್ಯೂಲ್ ಆಸ್ತಿಗಳಿಗೆ ಸಂಬಂಧಿಸಿದಂತೆ, ಅಳತೆ ಸರಿಪಡಿಸಿ ಕೊಡುವ ಬಗ್ಗೆ ಅರ್ಜಿದಾರರಾದ ಶ್ರೀಮತಿ ಡಿ. ಹಸ್ಮತ್‌ಬಿ ಗಂಡ ಲೇಟ್ ಅಲ್ಲಾಭಕ್ಷಿಸಾಬ್ ಇವರು ಈ ಕಛೇರಿಗೆ ಮನವಿ ಸಲ್ಲಿಸಿರುತ್ತಾರೆ. ಅದರಂತೆ ಕಛೇರಿ ದಾಖಲಾತಿಗಳಲ್ಲಿ ಲಭ್ಯವಾದ ಅಳತೆ ಮತ್ತು ಸ್ಥಳ ಪರಿಶೀಲನೆ ಸಂದರ್ಭದಲ್ಲಿ ಲಭ್ಯವಾದ ಅಳತೆಯನ್ನು ತೆರಿಗೆಯನ್ನು ನಿರ್ಧರಿಸಿ ವಸೂಲಿ ಮಾಡುವ ಸಲುವಾಗಿ ಕಛೇರಿ ವಹಿಯಲ್ಲಿ ನಮೂದಿಸಿ, ಮುಂದುವರೆಸುವ ಬಗ್ಗೆ ಅಕ್ಕ-ಪಕ್ಕದ ಹಾಗೂ ಹಕ್ಕು ಬಾಧ್ಯತೆಯುಳ್ಳವರು ಪ್ರಕಟಣೆಗೊಂಡ ದಿನಾಂಕದಿಂದ 30 ದಿನದೊಳಗಾಗಿ ದೃಢೀಕರಿಸುವ ದಾಖಲೆಗಳೊಂದಿಗೆ ಲಿಖಿತವಾಗಿ ಸಲಹೆ/ಸೂಚನೆ/ಆಕ್ಷೇಪಣೆಗಳನ್ನು ಸಲ್ಲಿಸಲು ಕೋರಿದೆ. ಒಂದು ವೇಳೆ ನಿಗದಿತ ಅವಧಿಯಲ್ಲಿ ಯಾವುದೇ ರೀತಿಯ ತಕರಾರು/ಆಕ್ಷೇಪಣೆಗಳು ಬಾರದೇ ಇದ್ದ ಪಕ್ಷದಲ್ಲಿ ಪುರಸಭೆ ಕಾಯ್ದೆಯನ್ವಯ ಸ್ಥಳದಲ್ಲಿ ಲಭ್ಯವಾದ ಅಳತೆಗಳನ್ನು ನಮೂದಿಸಿ ಅರ್ಜಿದಾರರ ಕೋರಿಕೆಯಂತೆ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು ಹಾಗೂ ಅವಧಿ ಮೀರಿ ಬರುವ ಯಾವುದೇ ರೀತಿಯ ಲಿಖಿತ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ.

**ಷೆಡ್ಯೂಲ್ :**

| ಕ್ರ.ಸಂ. | ಆಸ್ತಿ ಸಂಖ್ಯೆ | ನಮೂದಿಸಬೇಕಾದ ಅಳತೆ | ಚೆಕ್ಕುಬಂದಿ |
|---|---|---|---|
| 01 | 363/2085/ಎ | ಪೂರ್ವ-ಪಶ್ಚಿಮ 64 ಅಡಿ X ಉತ್ತರ-ದಕ್ಷಿಣ 18.6 ಅಡಿ | ಪೂರ್ವ - ಸಂದು, ಪಶ್ಚಿಮ-ರಸ್ತೆ, ಉತ್ತರ - ಸಂದು, ದ:ಬೀಡಿ ಕರೀಂ ಹಾಗೂ ನಮ್ಮ ಮನೆಯ ಮಧ್ಯದಲ್ಲಿರುವ ಹುದುವಿನ ಗೋಡೆ |

ಸಹಿ/- ಮುಖ್ಯಾಧಿಕಾರಿ, ಪುರಸಭೆ, ಹರಪನಹಳ್ಳಿ.

# ರಾಜ್ಯದ 28 ಲೋಕಸಭಾ ಕ್ಷೇತ್ರಗಳಿಗೆ ನಾಮಪತ್ರ ಸಲ್ಲಿಕೆ ಪೂರ್ಣ

ಬೆಂಗಳೂರು, ಏ. 19 - ಕರ್ನಾಟಕ ರಾಜ್ಯದ 28 ಲೋಕಸಭಾ ಕ್ಷೇತ್ರಗಳಿಗೆ ಎರಡು ಹಂತಗಳಲ್ಲಿ ನಾಮಪತ್ರ ಸಲ್ಲಿಕೆ ಕಾರ್ಯ ಪೂರ್ಣಗೊಂಡಿದ್ದು, ಇನ್ನು ಮತದಾನವಷ್ಟೇ ಬಾಕಿ ಉಳಿದಿದೆ. ಈಗಾಗಲೇ ಹಳೆಯ ಮೈಸೂರು ಭಾಗದ 14 ಲೋಕಸಭಾ ಕ್ಷೇತ್ರಗಳಿಗೆ ಮೊದಲ ಹಂತದಲ್ಲಿ ಬಿರುಸಿನ ಚುನಾವಣಾ ಪ್ರಚಾರವನ್ನು ಅಭ್ಯರ್ಥಿಗಳು ಕೈಗೊಂಡಿದ್ದು, ಏಪ್ರಿಲ್ 26ರಂದು ಮತದಾನ ಜರುಗಲಿದೆ.

ದಾವಣಗೆರೆ, ಶಿವಮೊಗ್ಗ, ಉತ್ತರ ಕನ್ನಡ, ಹಾವೇರಿ, ಧಾರವಾಡ, ಬೆಳಗಾವಿ, ಚಿಕ್ಕೋಡಿ, ವಿಜಾಪುರ, ಬಾಗಲಕೋಟೆ, ಬೀದರ್, ಗುಲ್ಬರ್ಗ, ರಾಯಚೂರು, ಕೊಪ್ಪಳ ಹಾಗೂ ಬಳ್ಳಾರಿ ಲೋಕಸಭಾ ಕ್ಷೇತ್ರಗಳಿಗೆ ಶುಕ್ರವಾರ ನಾಮಪತ್ರ ಸಲ್ಲಿಕೆ ಕಾರ್ಯ ಪೂರ್ಣಗೊಂಡಿತು.

ಈ ಕ್ಷೇತ್ರಗಳ ನಾಮಪತ್ರ ಪರಿಶೀಲನೆ ಕಾರ್ಯ ಏಪ್ರಿಲ್ 20 ರಂದು ನಡೆಯಲಿದ್ದು, ನಾಮಪತ್ರ ಹಿಂತೆಗೆದು ಕೊಳ್ಳಲು ಏಪ್ರಿಲ್ 22 ಕೊನೆಯ ದಿನವಾಗಿರುತ್ತದೆ. ಮೇ 7ರಂದು ಮತದಾನ ನಡೆಯಲಿದ್ದು, ಜೂನ್ 4ರಂದು ಆಯಾ ಜಿಲ್ಲಾ ಕೇಂದ್ರಗಳಲ್ಲಿ ರಾಜ್ಯದ 28 ಲೋಕ ಸಭಾ ಕ್ಷೇತ್ರಗಳ ಮತ ಎಣಿಕೆ ನಡೆಯಲಿದೆ. ಎರಡನೇ ಹಂತದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ಮೇಲ್ನೋಟಕ್ಕೆ ಜಿದ್ದಾಜಿದ್ದಿ ಕಂಡು ಬಂದಿದೆ. ಈ ಕ್ಷೇತ್ರಗಳಲ್ಲಿ ಉಭಯ ಪಕ್ಷಗಳಿಂದಲೂ ಪ್ರಭಾವಿ ನಾಯಕರ ಕುಟುಂಬದವರೇ ಕಣಕ್ಕಿಳಿದಿದ್ದಾರೆ.

ಸಿದ್ದರಾಮಯ್ಯ ಸಂಪುಟದಲ್ಲಿ ಸಚಿವರಾಗಿರುವ ಎಸ್.ಎಸ್. ಮಲ್ಲಿಕಾರ್ಜುನ್ ತಮ್ಮ ಪತ್ನಿ ಪ್ರಭಾ ಮಲ್ಲಿಕಾರ್ಜುನ್ ಅವರನ್ನು ದಾವಣಗೆರೆಯಿಂದಲೂ, ಲಕ್ಷ್ಮಿ ಹೆಬ್ಬಾಳ್ಕರ್ ಪುತ್ರ ಮೃಣಾಲ್ ಹೆಬ್ಬಾಳ್ಕರ್ ಬೆಳಗಾವಿಯಿಂದ, ಸತೀಶ್ ಜಾರಕಿಹೊಳಿ ಪುತ್ರಿ ಪ್ರಿಯಾಂಕ ಜಾರಕಿ ಹೊಳಿ ಚಿಕ್ಕೋಡಿಯಿಂದಲೂ, ಶಿವಾನಂದ ಪಾಟೀಲ್‌ಪುತ್ರಿಸಂಯುಕ್ತಪಾಟೀಲ್‌ಬಾಗಲಕೋಟೆಯಿಂದಲೂ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಅಳಿಯ ರಾಧಾಕೃಷ್ಣ ಗುಲ್ಬರ್ಗದಿಂದ, ಈಶ್ವರಖಂಡ್ರೆ ಪುತ್ರ ಸಾಗರ್ ಖಂಡ್ರೆ ಬೀದರ್‌ನಿಂದ ಕಾಂಗ್ರೆಸ್ ಅಭ್ಯರ್ಥಿಗಳಾಗಿ ಕಣಕ್ಕಿಳಿದಿದ್ದಾರೆ.

ಇನ್ನು ಬಿಜೆಪಿಯಿಂದ ಸಂಸದ ಸಿದ್ದೇಶ್ವರ ಪತ್ನಿ ಗಾಯತ್ರಿ ಅವರು ದಾವಣಗೆರೆಯಿಂದ, ಮಾಜಿ ಮುಖ್ಯಮಂತ್ರಿಗಳಾದ ಜಗದೀಶ್ ಶೆಟ್ಟರ್ ಬೆಳಗಾವಿಯಿಂದ, ಬಸವರಾಜ ಬೊಮ್ಮಾಯಿ ಹಾವೇರಿಯಿಂದಲೂ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಪುತ್ರ ಬಿ.ವೈ.ರಾಘವೇಂದ್ರ ಶಿವಮೊಗ್ಗದಿಂದ, ಮಾಜಿ ಉಪಮುಖ್ಯಮಂತ್ರಿ ಬಿ.ಶ್ರೀರಾಮುಲು ಬಳ್ಳಾರಿಯಿಂದ, ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಧಾರವಾಡದಿಂದ, ಮತ್ತೊಬ್ಬ ಮಂತ್ರಿ ಭಗವಂತ ಖೂಬಾ ಬೀದರ್‌ನಿಂದ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಮೊದಲನೇ ಹಂತಕ್ಕಿಂತ ಎರಡನೇ ಹಂತದಲ್ಲಿ ಪ್ರಭಾವಿಗಳ ಮುಂದೆ ಪ್ರಭಾವಿಗಳೇ ಸೆಣೆಸಾಟಕ್ಕೆ ಇಳಿದಿದ್ದಾರೆ.

ಕೇಂದ್ರ ಮತ್ತು ರಾಜ್ಯದ ಪ್ರಭಾವೀ ಮುಖಂಡರು ಮೊದಲ ಹಂತದ 14 ಕ್ಷೇತ್ರಗಳಲ್ಲೇ ಚುನಾವಣಾ ಪ್ರಚಾರ ಕೈಗೊಂಡಿದ್ದು, ಈ ಭಾಗದಲ್ಲಿ ಏಪ್ರಿಲ್ 24ರ ಸಂಜೆಗೆ ಬಹಿರಂಗ ಪ್ರಚಾರ ಅಂತ್ಯಗೊಳ್ಳಲಿದೆ. ತದನಂತರ ಈ ಎಲ್ಲಾ ಮುಖಂಡರು ಎರಡನೇ ಹಂತದಲ್ಲಿ ನಡೆಯುತ್ತಿರುವ ಚುನಾವಣಾ ಕಡೆ ಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತಾರೆ.

ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

50 1974 2023

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಶನಿವಾರ, ಏಪ್ರಿಲ್ 20, 2024

☎ 08192 254736 91642 99999

## ಊಟದ ವಿಷಯದಲ್ಲಿ ಸಣ್ಣತನ

### ಇ.ಡಿ. ವರ್ತನೆ ವಿರುದ್ಧ ಕೇಜ್ರಿವಾಲ್ ಆಕ್ಷೇಪ

ನವದೆಹಲಿ, ಏ. 19 – ಜೈಲಿನ ಊಟದ ಬಗ್ಗೆ ಜಾರಿ ನಿರ್ದೇಶನಾಲಯ ಸಣ್ಣತನ ಹಾಗೂ ರಾಜಕೀಯದ ವರ್ತನೆ ತೋರಿಸುತ್ತಿದೆ. ನನ್ನ ವೈದ್ಯರ ಸಲಹೆಯಂತೆ ಊಟ ಮಾಡುತ್ತಿದ್ದೇನೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ.



ಅಕ್ರಮ ಹಣ ಪ್ರಕರಣದಲ್ಲಿ ಬಂಧಿತರಾಗಿರುವ ಕೇಜ್ರಿವಾಲ್, ಸಕ್ಕರೆ ಕಾಯಿಲೆ ಹೊಂದಿದ್ದರೂ ಜೈಲಿನಲ್ಲಿ ಸಕ್ಕರೆ ಅಂಶವಿರುವ ಆಹಾರ ಸೇವಿಸುತ್ತಿದ್ದಾರೆ. ಜಾಮೀನು ಪಡೆಯಲು ಈ ರೀತಿ ಮಾಡುತ್ತಿದ್ದಾರೆ ಎಂದು ಜಾರಿ ನಿರ್ದೇಶನಾಲಯ ಆರೋಪಿಸಿತ್ತು.

ಈ ಬಗ್ಗೆ ಕೇಜ್ರಿವಾಲ್ ಪರವಾಗಿ ನ್ಯಾಯಾಲಯದ ಎದುರು ಹಾಜರಿದ್ದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ, ಜಾಮೀನಿಗಾಗಿ ಕೇಜ್ರಿವಾಲ್ ಅವರು ಪಾರ್ಶ್ವವಾಯುವಿನ ಅಪಾಯ ತಂದುಕೊಳ್ಳುತ್ತಾರೆಯೇ? ಬಂಧನಕ್ಕೆ ಮುಂಚೆ ವೈದ್ಯರು ನೀಡಿದ ಸಲಹೆಯಂತೆ ಅವರು ಪಥ್ಯ ಮಾಡುತ್ತಿದ್ದಾರೆ ಎಂದಿದ್ದಾರೆ.

ಕೇಜ್ರಿವಾಲ್ ಅವರಿಗೆ ಮನೆಯಿಂದ 48 ಬಾರಿ ಊಟ (4ನೇ ಪುಟಕ್ಕೆ)

## ಗದಗ ನಗರಸಭೆ ಉಪಾಧ್ಯಕ್ಷೆ ಪುತ್ರ ಸೇರಿ ನಾಲ್ವರ ಬರ್ಬರ ಹತ್ಯೆ

ಗದಗ, ಏ. 19 - ಇಲ್ಲಿನ ಗದಗ-ಬೆಟಗೇರಿ ನಗರಸಭೆ ಉಪಾಧ್ಯಕ್ಷೆ ಸುನಂದಾ ಬಾಕಳೆ ಅವರ ಪುತ್ರ ಸೇರಿ ದಂತೆ ನಾಲ್ವರನ್ನು ಗುರುವಾರ ಮಧ್ಯ ರಾತ್ರಿ ಬರ್ಬರವಾಗಿ ಹತ್ಯೆ ಮಾಡಲಾಗಿದೆ.

ನಗರದ ದಾಸರ ಓಣಿಯಲ್ಲಿರುವ ಸುನಂದ ಬಾಕಳೆ ಅವರ ಮನೆಯಲ್ಲಿ ಈ ಘಟನೆ ನಡೆದಿದೆ. ಕಾರ್ತಿಕ್ ಬಾಕಳೆ (27), ಪರಶುರಾಮ (58), ಲಕ್ಷ್ಮೀಬಾಯಿ (50) ಹಾಗೂ ಆಕಾಂಕ್ಷ (17) ಹತ್ಯೆಗೀಡಾಗಿದ್ದಾರೆ. ಪ್ರಕಾಶ್ ಬಾಕಳೆ ಹಾಗೂ ಸುನಂದ ಬಾಕಳೆ ಪುತ್ರ ಕಾರ್ತಿಕ್ ಬಾಕಳೆ ರಿಯಲ್ ಎಸ್ಟೇಟ್ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದರು.

ಇದೊಂದು ಗಂಭೀರ ಹಾಗೂ ಸೂಕ್ಷ್ಮ ಪ್ರಕರಣ. ಆರೋಪಿಗಳ ಪತ್ತೆಗಾಗಿ ನಾಲ್ಕು ವಿಶೇಷ ತಂಡಗಳನ್ನು ರಚಿಸಿ, ತನಿಖೆ ನಡೆಸಲಾಗುತ್ತಿದೆ ಎಂದು ಬೆಳಗಾವಿ ಉತ್ತರ ವಲಯ ಐಜಿಪಿ ವಿಕಾಸ್ ಕುಮಾರ್ ತಿಳಿಸಿದರು.

## ನದಿಯಲ್ಲಿ ಮುಳುಗಿದ ಮತಯಂತ್ರ ವಾಹನ

ಉತ್ತರ ಲಖೀಂಪುರ (ಅಸ್ಸಾಂ), ಏ. 19 – ಮತಯಂತ್ರವನ್ನು ಸಾಗಿಸುತ್ತಿದ್ದ ವಾಹನವೊಂದು ನದಿಯಲ್ಲಿ ಭಾಗಶಃ ಮುಳುಗಿದ ಘಟನೆ ಅಸ್ಸಾಂನ ಲಖೀಂಪುರ ಲೋಕಸಭಾ ಕ್ಷೇತ್ರದಲ್ಲಿ ನಡೆದಿದೆ. ವಾಹನವೊಂದರಲ್ಲಿ ಮತಯಂತ್ರವನ್ನು ಸಾಗಿಸಲಾಗುತ್ತಿತ್ತು. ಈ ವಾಹನ ಯಾಂತ್ರಿಕೃತ ದೋಣಿಯ ಮೂಲಕ ಅಮರ್ಪುರ ಪ್ರದೇಶಕ್ಕೆ ತೆರಳುತ್ತಿತ್ತು. ಆಗ ದಿಯೋಪನಿ ನದಿಯಲ್ಲಿ ಹಠಾತ್ತನೆ ನೀರು ಹೆಚ್ಚಾಗಿ ದೋಣಿ ನೆಲ ಕಚ್ಚಿತು. ಆಗ ವಾಹನ ಸಹ ಭಾಗಶಃ ಮುಳುಗಿತು. ವಾಹನದ ಚಾಲಕ ಹಾಗೂ ಮತಗಟ್ಟೆ ಅಧಿಕಾರಿ ನೀರು ನುಗ್ಗುವ ಮೊದಲೇ ಹೊರ ಬಂದು ಪಾರಾಗಿದ್ದಾರೆ.

# ಮೂರು ದಿಕ್ಕುಗಳಿಂದ ಸಾಗಿ ಬಂದ ಕೇಸರಿ ಪಡೆ

## ಬೃಹತ್ ಮೆರವಣಿಗೆಯಲ್ಲಿ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ನಾಮಪತ್ರ ದಾಖಲು

ದಾವಣಗೆರೆ, ಏ. 19 – ನಗರದ ಮೂರು ದಿಕ್ಕುಗಳಿಂದ ಆರಂಭಿಸಲಾದ ಬೃಹತ್ ಮೆರವಣಿಗೆಯ ಮೂಲಕ ಲೋಕಸಭಾ ಚುನಾವಣೆಗೆ ಬಿಜೆಪಿ ಅಭ್ಯರ್ಥಿಯಾಗಿ ಗಾಯತ್ರಿ ಸಿದ್ದೇಶ್ವರ್ ಅವರು ನಾಮಪತ್ರ ಸಲ್ಲಿಸಿದ್ದಾರೆ. ಮೆರವಣಿಗೆಯಲ್ಲಿ ಕೇಸರಿ ಪಕ್ಷಕ್ಕೆ ಜೆಡಿಎಸ್ ಸಹ ಸಾಥ್ ನೀಡಿತ್ತು.

ನಗರದಲ್ಲಿ ಏಕಕಾಲಕ್ಕೆ ಮೂರು ಕಡೆಯಿಂದ ಆರಂಭಗೊಂಡ ಮೆರವಣಿಗೆ ಗಾಂಧಿ ವೃತ್ತದಲ್ಲಿ ಜೊತೆಯಾಗಿ ಹಳೇ ವಾಣಿ ಹೋಂಡಾ ಶೋ ರೂಮ್‌ವರೆಗೂ ತೆರಳಿತು. ಸಾವಿರಾರು ಸಂಖ್ಯೆಯಲ್ಲಿ ಕಾರ್ಯಕರ್ತರು, ಮುಖಂಡರು ಹಾಗೂ ಅಭಿಮಾನಿಗಳು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.



ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ್ ಅವರು ನಗರ ದೇವತೆ ದುಗ್ಗಮ್ಮ ದೇವಿಗೆ ವಿಶೇಷ ಪೂಜೆ ಸಲ್ಲಿಸಿ ಮೆರವಣಿಗೆಗೆ ಚಾಲನೆ ನೀಡಿದರು. ಪತಿ ಸಂಸದ ಜಿ.ಎಂ.ಸಿದ್ದೇಶ್ವರ್ ನಿಟುವಳ್ಳಿ ದುರ್ಗಾಂಬಿಕಾ ದೇವಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ ಮೆರವಣಿಗೆಗೆ ಚಾಲನೆ ನೀಡಿದರು. ಹರಿಹರ ಶಾಸಕ ಬಿ.ಪಿ.ಹರೀಶ್ ಹಾಗೂ ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್ ನೇತೃತ್ವದ ತಂಡ ರಾಂ ಅಂಡ್ ಕೋ ವೃತ್ತದಲ್ಲಿ ಗಣೇಶ ದೇವರಿಗೆ ಪೂಜೆ ಸಲ್ಲಿಸಿ ಮೆರವಣಿಗೆಗೆ ಚಾಲನೆ ನೀಡಿದರು.

ನಂತರ ಗಾಯತ್ರಿ ಅವರು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಮಾಜಿ ಸಚಿವರಾದ ಮಾಧುಸ್ವಾಮಿ, ಭೈರತಿ ಬಸವರಾಜ್, ಪರಿಷತ್ ಸದಸ್ಯ ರವಿಕುಮಾರ್ ಅವರ ಜೊತೆ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ನಾಮಪತ್ರ ಸಲ್ಲಿಸಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಬಳ್ಳಾರಿ ಸಂಸದ ದೇವೇಂದ್ರಪ್ಪ, ಗಂಗಾವತಿ ಶಾಸಕ ಜನಾರ್ದನ ರೆಡ್ಡಿ, ಹರಿಹರ ಶಾಸಕ ಬಿ.ಪಿ.ಹರೀಶ್, ಪರಿಷತ್ ಸದಸ್ಯ ರವಿಕುಮಾರ್, ಮಾಜಿ ಸಚಿವರಾದ ಭೈರತಿ ಬಸವರಾಜ್, ಮುರುಗೇಶ್ ನಿರಾಣಿ, ಎಸ್.ಎ.ರವೀಂದ್ರನಾಥ್, ಜೆ.ಮಾಧುಸ್ವಾಮಿ, ಜಿ. ಕರುಣಾಕರ ರೆಡ್ಡಿ, ಎಂ.ಪಿ.ರೇಣುಕಾಚಾರ್ಯ, ಮಾಜಿ ಶಾಸಕರಾದ ಎಸ್.ವಿ.ರಾಮಚಂದ್ರಪ್ಪ, ಹೆಚ್.ಪಿ. ರಾಜೇಶ್, ಮಾಡಾಳ್ ವಿರೂಪಾಕ್ಷಪ್ಪ, ಪ್ರೊ.ಲಿಂಗಣ್ಣ, ಬಸವರಾಜನಾಯ್ಕ್, ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್, ಮಾಜಿ ಮೇಯರ್ ಬಿ.ಜಿ. (4ನೇ ಪುಟಕ್ಕೆ)

### ದಾವಣಗೆರೆ ಕ್ಷೇತ್ರವನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದೇವೆ: ಯಡಿಯೂರಪ್ಪ



**ದಾವಣಗೆರೆ ಲೋಕಸಭಾ ಕ್ಷೇತ್ರವನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದೇವೆ. ಇಲ್ಲಿ ದೊಡ್ಡ ಅಂತರದಿಂದ ಗೆಲ್ಲುವ ವಿಶ್ವಾಸ ಇದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ.ಬಿಜೆಪಿ ಅಭ್ಯರ್ಥಿಯಾಗಿ ಗಾಯತ್ರಿ ಸಿದ್ದೇಶ್ವರ್ ನಾಮಪತ್ರ ಸಲ್ಲಿಸಿದ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕ್ಷೇತ್ರದಲ್ಲಿ ಸವಾಲಿದೆ. ನಾವು ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದೇವೆ. ನೂರಕ್ಕೆ ನೂರು ಗೆಲ್ಲುವ ವಿಶ್ವಾಸ ಇದೆ. ಗಾಯತ್ರಿ ಸಿದ್ದೇಶ್ವರ ಅವರು ದೊಡ್ಡ ಅಂತರದಲ್ಲಿ ಗೆಲ್ಲಲಿದ್ದಾರೆ ಎಂದು ತಿಳಿಸಿದರು.ರಾಜ್ಯದಲ್ಲಿ ವಾತಾವರಣ ಮೊದಲಿಗಿಂತ ಚೆನ್ನಾಗಿದೆ. ದಿನೇ ದಿನೇ ಬಿಜೆಪಿ ಪರವಾದ ವಾತಾವರಣ ಹೆಚ್ಚಾಗುತ್ತಿದೆ. ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ರಾಜ್ಯದ ಎಲ್ಲಾ 28 ಕ್ಷೇತ್ರಗಳಲ್ಲಿ ಗೆಲ್ಲುವ ಪ್ರಯತ್ನ ಮಾಡುತ್ತಿದ್ದೇವೆ. ಇದರಲ್ಲಿ ಯಶಸ್ವಿಯಾಗುವ ವಿಶ್ವಾಸ ಇದೆ ಎಂದವರು ಹೇಳಿದರು.**

### 'ಗರೀಬಿ ಹಟಾವೋ' ಮಾಡಿದ್ದು ಮೋದಿ



ದಾವಣಗೆರೆ, ಏ. 19 - ಇಂದಿರಾ ಗಾಂಧಿ ಅವರು ಪ್ರಧಾನ ಮಂತ್ರಿಯಾಗಿದ್ದಾಗ ಕಾಂಗ್ರೆಸ್ ಪಕ್ಷ 'ಗರೀಬಿ ಹಟಾವೋ' ಘೋಷಣೆ ಮಾಡಿತ್ತು. ಆದರೆ, ಅವರ ಮೊಮ್ಮಗ ರಾಹುಲ್ ಗಾಂಧಿ ಬಂದರೂ ಬಡತನ ನೀಗಿರಲಿಲ್ಲ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅವಧಿಯಲ್ಲಿ 25 ಕೋಟಿ ಜನರು ಬಡತನದಿಂದ ಹೊರ ಬಂದಿದ್ದಾರೆ ಎಂದು ನಟಿ ಹಾಗೂ ಬಿಜೆಪಿ ಧುರೀಣೆ ಶ್ರುತಿ ಹೇಳಿದರು.

ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರ ನಾಮಪತ್ರ ಸಲ್ಲಿಕೆಯ ಮೆರವಣಿಗೆಯಲ್ಲಿ ಅವರು ಮಾತನಾಡಿದರು.

ಕಾಂಗ್ರೆಸ್ ಸರ್ಕಾರ ಗ್ಯಾರಂಟಿಗಳ ಹೆಸರಿನಲ್ಲಿ ಮತ ಕೇಳುತ್ತಿದೆ. ಯಾವುದೇ ಯೋಜನೆಯನ್ನು ಕೇವಲ ಆಕರ್ಷಣೆಗೆ ಸೀಮಿತವಾಗಿ ಮಾಡಬಾರದು. ಕಾಂಗ್ರೆಸ್ ಆಕರ್ಷಣೆಗಾಗಿ ಮಾತ್ರ ಗರೀಬಿ ಹಟಾವೋ ಘೋಷಣೆ ಮಾಡಿತ್ತು, ಆ ದಿಸೆಯಲ್ಲಿ ಕೆಲಸ ಮಾಡಿದ್ದು ಮೋದಿ ಎಂದು ಹೇಳಿದರು.

ಪ್ರಧಾನಿ ಮೋದಿ ವಿರುದ್ಧ ಒಂದೇ ಒಂದು ಭ್ರಷ್ಟಾಚಾರದ ಆರೋಪ ಇಲ್ಲ. ಆದರೆ, ಭ್ರಷ್ಟಾಚಾರ ಪ್ರಕರಣಗಳಲ್ಲಿ ಸಿಲುಕಿ ಜಾಮೀನಿನ ಮೇಲಿರುವವರು ಆರೋಪ ಮಾಡುತ್ತಿದ್ದಾರೆ ಎಂದು ಆಕ್ಷೇಪಿಸಿದರು. ಬಿಜೆಪಿ ಎಲ್ಲ ಧರ್ಮದವರನ್ನು ಒಂದಾಗಿ (4ನೇ ಪುಟಕ್ಕೆ)

# ದೂರದೃಷ್ಟಿಯಿಲ್ಲದವರನ್ನು ತಿರಸ್ಕರಿಸಿ



> ನಾವು ಮುಂದಿನ ದಿನಗಳಲ್ಲಿ ಕೇಂದ್ರದಿಂದ ನಾಲ್ಕೈದು ಕೈಗಾರಿಕೆಗಳನ್ನು ದಾವಣಗೆರೆ ಜಿಲ್ಲಾ ವ್ಯಾಪ್ತಿಯಲ್ಲಿ ಆರಂಭಿಸಲು ಚಿಂತನೆ ನಡೆಸಿದ್ದು, ನಮ್ಮ ಜನಕ್ಕೆ ನಾವು ಉದ್ಯೋಗ ನೀಡುತ್ತೇವೆ.
> - ಡಾ. ಪ್ರಭಾ ಮಲ್ಲಿಕಾರ್ಜುನ್ ಲೋಕಸಭಾ ಕಾಂಗ್ರೆಸ್ ಅಭ್ಯರ್ಥಿ

ದಾವಣಗೆರೆ, ಏ.19- ಬರೀ ಸುಳ್ಳು ಆಶ್ವಾಸನೆ ಕೊಡುತ್ತಾ ಮತದಾರರನ್ನು ವಂಚಿಸಿರುವ ದಾವಣಗೆರೆ ಬಿಜೆಪಿ ಸಂಸದರನ್ನು ಸೋಲಿಸುವ ಮೂಲಕ ತಕ್ಕ ಪಾಠ ಕಲಿಸುವುದರ ಜೊತೆಗೆ ನನಗೂ ಒಂದು ಅವಕಾಶ ನೀಡಬೇಕು ಎಂದು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಮನವಿ ಮಾಡಿದರು.

ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 42ನೇ ವಾರ್ಡ್‌ನ ಸಿದ್ದವೀರಪ್ಪ ಬಡಾ ವಣೆಯಲ್ಲಿ ಇಂದು ಚುನಾವಣಾ ಪ್ರಚಾರ ನಡೆಸಿ, ಮತದಾರರನ್ನುದ್ದೇಶಿಸಿ ಅವರು ಮಾತನಾಡಿದರು

ಕಳೆದ 25 ವರ್ಷಗಳಿಂದ ನಮ್ಮನ್ನು ಪ್ರತಿನಿಧಿಸುವವರು, ದಾವಣಗೆರೆಯಲ್ಲಾಗಲೀ, ದಾವಣಗೆರೆ ಜಿಲ್ಲೆಯಲ್ಲಾಗಲೀ ಯಾವುದೇ ಕೈಗಾರಿಕೆಯನ್ನು ತರದೇ ಇರುವುದರಿಂದ ಇಲ್ಲಿನ ಜನತೆ ಬೆಂಗಳೂರು, ಮುಂಬೈನಂತಹ ಬೇರೆ-ಬೇರೆ ನಗರಗಳಿಗೆ ಉದ್ಯೋಗ ಅರಸಿ ಹೋಗುತ್ತಿದ್ದಾರೆ. ಹಾಗಾಗಿ ದೂರ ದೃಷ್ಟಿಯಿಲ್ಲದವರನ್ನು ತಿರಸ್ಕರಿಸಿ ಎಂದರು.

ಕೈಗಾರಿಕೆಗಳ ಜೊತೆಗೆ ಐಟಿ, ಬಿಟಿ ಕಂಪನಿಗಳೂ ದಾವಣಗೆರೆಯಲ್ಲಿ ಸ್ಥಾಪನೆಯಾಗಿ ನಮ್ಮ ಯುವಕ-ಯುವತಿಯರಿಗೆ ಉದ್ಯೋಗಾವಕಾಶ ದೊರೆಯಬೇಕಾಗಿದೆ. ಇಂತಹ ಯಾವ ಕೆಲಸವನ್ನೂ ಮಾಡದೇ ಸುಳ್ಳು ಆಶ್ವಾಸನೆ ಕೊಡುತ್ತಾ ಮತದಾರರನ್ನು ವಂಚಿಸುತ್ತಿದ್ದಾರೆ.

ಕ್ಷೇತ್ರದಲ್ಲಿ ನಮ್ಮ ಪಕ್ಷದವರೇ ಆದ ಏಳು ಜನ ಶಾಸಕರಿದ್ದಾರೆ, ಜಿಲ್ಲಾ ಉಸ್ತುವಾರಿ ಸಚಿವರಿದ್ದಾರೆ. ನನ್ನನ್ನೂ ಈ ಬಾರಿ ಲೋಕಸಭೆಗೆ ಆಯ್ಕೆ ಮಾಡಿದರೆ ನಾವೆಲ್ಲರೂ ಒಟ್ಟಾಗಿ ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುವುದಾಗಿ ಪ್ರಭಾ ಹೇಳಿದರು.

ನಗರಕ್ಕೆ ಜಲಸಿರಿಯಂತಹ ದಿನನಿತ್ಯ ನೀರು ಸರಬರಾಜು ಮಾಡುವ ಯೋಜನೆಗೆ ದಾವಣಗೆರೆ ನಗರ ಪ್ರಥಮ ಹಂತದಲ್ಲೇ ಆಯ್ಕೆಯಾಗುವಲ್ಲಿ ಮತ್ತು ಸ್ಮಾರ್ಟ್ ಸಿಟಿ ಯೋಜನೆಗೆ ಸೇರ್ಪಡೆ ಯಾಗುವಲ್ಲಿ ಹಿಂದಿನ ಕಾಂಗ್ರೆಸ್ ಸರ್ಕಾರದ ಅಭಿವೃದ್ಧಿ ಕೆಲಸಗಳೇ ಕಾರಣವಾಗಿದ್ದು, ಹಾಗಾಗಿ ಕಾಂಗ್ರೆಸ್ ಪಕ್ಷದಿಂದ ಮಾತ್ರ ರಾಜ್ಯ ಮತ್ತು ದೇಶದ ಅಭಿವೃದ್ಧಿ ಸಾಧ್ಯ ಎಂದರು.

ದೂಡಾ ಮಾಜಿ ಅಧ್ಯಕ್ಷ ಶಾಮನೂರು ಜಿ.ಹೆಚ್. ರಾಮಚಂದ್ರಪ್ಪ, ಪಾಲಿಕೆ ಮಾಜಿ ಸದಸ್ಯರಾದ ಜಿ.ಬಿ. ಲಿಂಗರಾಜ್, ಶ್ರೀಮತಿ ವಿಜಯ ಲಿಂಗರಾಜ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ ಶಿವಕುಮಾರ್, ಪ್ರಚಾರ ಸಮಿತಿ ಅಧ್ಯಕ್ಷ ಶಾಮನೂರು ಟಿ. ಬಸವರಾಜ್, ಡಾ. ಟಿ.ಜಿ. ರವಿಕುಮಾರ್ ಸೇರಿದಂತೆ ಇತರರು ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಿದ್ದರು.

# ಮೊದಲ ಹಂತ : ಶೇ.63 ರಷ್ಟು ಮತದಾನ

ನವದೆಹಲಿ, ಏ. 19 – ಲೋಕಸಭಾ ಚುನಾವಣೆಯ ಮೊದಲ ಹಂತದಲ್ಲಿ ಶೇ.63ರಷ್ಟು ಮತದಾನವಾಗಿದೆ. 21 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ 102 ಕ್ಷೇತ್ರಗಳಲ್ಲಿ ಮತದಾನವಾಗಿದೆ.

ಛತ್ತೀಸ್‌ಘಡದಲ್ಲಿ ಆಕಸ್ಮಿಕವಾಗಿ ಗ್ರೆನೇಡ್ ಲಾಂಚರ್ ಸಿಡಿದಿದ್ದು, ಸಿ.ಆರ್.ಪಿ.ಎಫ್. ಸೈನಿಕರೊಬ್ಬರು ಸಾವನ್ನಪ್ಪಿದ್ದಾರೆ. ಹಲವೆಡೆ ಹಿಂಸಾಚಾರದ ಘಟನೆಗಳು ನಡೆದಿವೆ.

ಏಳು ಹಂತಗಳಲ್ಲಿ ಚುನಾವಣೆ ನಡೆಯಲಿದ್ದು, ಮೊದಲ ಹಂತದ ಮತದಾನ ಬಹುತೇಕ ಶಾಂತಿಯುತವಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಬಿರು ಬಿಸಿಲಿನ ನಡುವೆಯೂ, ಜನರು ತಾಳ್ಮೆಯಿಂದ ಮತದಾನಕ್ಕಾಗಿ ಸರದಿಯಲ್ಲಿ ಕಾದು ನಿಂತಿದ್ದು ಕಂಡು ಬಂತು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮೂರನೇ ಅವಧಿಗೆ ಪುನರಾಯ್ಕೆ ಬಯಸಿದ್ದಾರೆ. ವಿಪಕ್ಷಗಳ ಒಕ್ಕೂಟವಾದ ಐ.ಎನ್.ಡಿ.ಐ.ಎ. ಈ ಬಾರಿ ಪುಟಿದೇಳುವ ಆಶಾಭಾವನೆಯಲ್ಲಿದೆ.

ತ್ರಿಪುರದಲ್ಲಿ ಅತಿ ಹೆಚ್ಚಿನ ಶೇ.80.17ರ ಮತದಾನವಾಗಿದೆ. ಪಶ್ಚಿಮ ಬಂಗಾಳದಲ್ಲಿ ಶೇ.77.57, ಮೇಘಾಲಯದಲ್ಲಿ ಶೇ.74.21, ಪುದುಚೆರಿಯಲ್ಲಿ ಶೇ.73.50 ಹಾಗೂ ಅಸ್ಸಾಂನಲ್ಲಿ ಶೇ.72.10ರ ಮತದಾನವಾಗಿದೆ. ಪೂರ್ವ ನಾಗಾಲ್ಯಾಂಡ್‌ನಲ್ಲಿ ಬುಡಕಟ್ಟು ಜನರು ಪ್ರತ್ಯೇಕ ರಾಜ್ಯದ ಬೇಡಿಕೆಗೆ ಒತ್ತಾಯಿಸಿ ಮುಷ್ಕರಕ್ಕೆ ಕರೆ ನೀಡಿದ್ದರು. ಇಲ್ಲಿನ ಆರು ಜಿಲ್ಲೆಗಳ ಮತದಾರರು ಮನೆಯೊಳಗೇ ಉಳಿದಿದ್ದರು.

ತಮಿಳುನಾಡೂ ಸೇರಿದಂತೆ ಏಳು ರಾಜ್ಯಗಳು ಹಾಗೂ ಮೂರು ಕೇಂದ್ರಾಡಳಿತ ಪ್ರದೇಶಗಳ ಎಲ್ಲಾ ಕ್ಷೇತ್ರಗಳಿಗೆ ಮೊದಲ ಹಂತದಲ್ಲಿ ಚುನಾವಣೆ ನಡೆದಿತ್ತು. ಇದೇ ವೇಳೆ ಅರುಣಾಚಲ ಪ್ರದೇಶ ಹಾಗೂ ಸಿಕ್ಕಿಂಗಳ ವಿಧಾನಸಭೆಗೂ ಮತದಾನ ನಡೆದಿದೆ.

ರಾತ್ರಿ 9 ಗಂಟೆಯ ಮಾಹಿತಿಯ ಪ್ರಕಾರ ಶೇ. 62.37ರ ಮತದಾನವಾಗಿದೆ. ಇನ್ನೂ ಹಲವಾರು ಮತಗಟ್ಟೆಗಳ ಮಾಹಿತಿ ಬರಬೇಕಿದೆ. ಅಂತಿಮ ಮತದಾನದ ಪ್ರಮಾಣ ಇನ್ನಷ್ಟು ಹೆಚ್ಚಾಗಲಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಹೊಸ ಮತದಾರರು, ನವ ವಿವಾಹಿತರು, ದಿವ್ಯಾಂಗರು ಹಾಗೂ ಹಿರಿಯರೂ ಸೇರಿದಂತೆ ಎಲ್ಲ ವರ್ಗದವರು ಹಾಗೂ ವಯೋಮಾನದವರು ಮತದಾನದಲ್ಲಿ ಪಾಲ್ಗೊಂಡಿದ್ದಾರೆ.

ತಮಿಳುನಾಡು, ಅರುಣಾಚಲ ಪ್ರದೇಶ, ಅಂಡಮಾನ್ ಹಾಗೂ ನಿಕೋಬಾರ್ ದ್ವೀಪಗಳು ಹಾಗೂ ಅಸ್ಸಾಂನ ಹಲವೆಡೆ ಮತ ಯಂತ್ರಗಳಲ್ಲಿ ಲೋಪಗಳು ಕಾಣಿಸಿಕೊಂಡಿವೆ.

ಪಶ್ಚಿಮ ಬಂಗಾಳದ ಕೂಚ್ ಬಿಹಾರ ಕ್ಷೇತ್ರದಲ್ಲಿ ಹಿಂಸಾಚಾರ ನಡೆದಿದೆ. ತೃಣಮೂಲ ಕಾಂಗ್ರೆಸ್ ಹಾಗೂ ಬಿಜೆಪಿ ಕಾರ್ಯಕರ್ತರು ಪರಸ್ಪರರ ವಿರುದ್ಧ ಕ್ರಮವಾಗಿ 80 ಹಾಗೂ 39 ದೂರುಗಳನ್ನು ದಾಖಲಿಸಿದ್ದಾರೆ. ಚುನಾವಣಾ ಹಿಂಸಾಚಾರ, ಮತದಾರರಿಗೆ ಬೆದರಿಕೆ ಹಾಗೂ ಮತಗಟ್ಟೆ ಏಜೆಂಟರ ಮೇಲಿನ ಹಲ್ಲೆ (4ನೇ ಪುಟಕ್ಕೆ)


ಜನ್ಮ ದಿನದ ಶುಭಾಶಯಗಳು





ತಮ್ಮ ಸಾರ್ಥಕ ಜೀವನದ 62 ವಸಂತಗಳನ್ನು ಪೂರೈಸಿ,
63ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ
ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ
ಪ್ರಾಂಶುಪಾಲರೂ ಹಾಗೂ ಯುವಕರ ಕಣ್ಮಣಿಗಳೂ ಆದ

ಡಾ|| ಹೆಚ್.ಬಿ. ಅರವಿಂದ್

ಅವರಿಗೆ ಜನ್ಮ ದಿನದ ಹಾರ್ದಿಕ ಶುಭಾಶಯಗಳು.

- ಪ್ರೊ|| ವೈ. ವೃಷಭೇಂದ್ರಪ್ಪ
- ಪ್ರೊ|| ಸಿ. ಎಚ್ ಮುರುಗೇಂದ್ರಪ್ಪ
- ಶ್ರೀ ಎಂ. ಬಿ. ರವಿ
- ಡಾ|| ನೇವಿಚಂದ್ರಪ್ಪ ಎಂ.
- ಶ್ರೀ ಉಮೇಶ್ ಎನ್. ಪಾಟೀಲ
- ಶ್ರೀ ವಸಂತಕುಮಾರ್ ಎಂ.
- ಶ್ರೀ ಬಿ. ಎನ್. ವೀರೇಶ್ ನಾಯ್ಕ
- ಶ್ರೀ ಎಸ್. ರಮೇಶ್
- ಶ್ರೀ ಡಿ. ಕೆ. ತಿಮ್ಮಪ್ಪ
- ಶ್ರೀ ಎಂ. ಸಿ. ಪಟೇಲ್
- ಡಾ|| ಎಸ್. ಸುರೇಶ್
- ಡಾ|| ಜಿ. ಪಿ. ದೇಸಾಯಿ
- ಶ್ರೀ ಎಸ್. ಎನ್. ಬಸವರಾಜ್
- ಶ್ರೀ ವಿಷ್ಣುವರ್ಧನ ರೆಡ್ಡಿ ಎಂ
- ಡಾ|| ಎಸ್. ಚಂದ್ರಶೇಖರ್
- ಡಾ|| ಅಶೋಕ್ ಕುಮಾರ್ ವಿ.
- ಶ್ರೀ ಜಗದೀಶ್ ಬಿ. ವಿ.
- ಶ್ರೀ ಪ್ರಕಾಶ್ ಎಂ. ಕೆ.
- ಶ್ರೀ ಸತೀಶ್ ಕುಮಾರ್ ಎಲ್.
- ಶ್ರೀ ರಘು ಕನಿಮೋಳಿ
- ಡಾ|| ವಿಜಯ್ ಕುಮಾರ್ ಎಸ್.
- ಶ್ರೀ ವೀರಣ್ಣ ಕೆ. ಆರ್.
- ಶ್ರೀ ಬಸವರಾಜ್ ಹೆಚ್. ಜಿ. (ಪುಟ್ಟು)
- ಶ್ರೀ ಕೆ. ಜಿ. ಕರುಣಾಕರ್
- ಶ್ರೀ ಬ್ರಮಾಲ್ ಬಿ.
- ಡಾ|| ಮಧುಚಂದ್ರ
- ಡಾ|| ಸುರೇಶ ಬಿ.
- ಶ್ರೀ ಎಂ.ವಿ.ವಿ.ಎಸ್. ಮೂರ್ತಿ
- ಡಾ|| ಪ್ರವೀಣ್ ಕುಮಾರ ಡಿ. ಜಿ.
- ಶ್ರೀ ವಿನಯ ಎಂ. ಟಿ.
- ಶ್ರೀ ತಿಮ್ಮೇಶ್
- ಶ್ರೀ ಶಂಕರ್
- ಶ್ರೀ ಮಂಜುನಾಥ ಎಂ. ಎನ್.

ಸದಸ್ಯರು, ವಾಯುವಿಹಾರ ಕುಟುಂಬ, ಆಂಜನೇಯ ಬಡಾವಣೆ, ದಾವಣಗೆರೆ.


# ದಾವಣಗೆರೆಗೆ 40 ಅಭ್ಯರ್ಥಿಗಳು, 54 ನಾಮಪತ್ರ

## ನಾಮಪತ್ರ ಸಲ್ಲಿಕೆಯ ಕೊನೆ ದಿನದಂದು 20 ನಾಮಪತ್ರ ಸಲ್ಲಿಕೆ

ದಾವಣಗೆರೆ, ಏ.19- ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ಮೇ 7 ರಂದು ಮತದಾನ ನಡೆಯಲಿದ್ದು, ನಾಮಪತ್ರ ಸಲ್ಲಿಕೆಗೆ ಕೊನೆ ದಿನವಾದ ಶುಕ್ರವಾರ 14 ಅಭ್ಯರ್ಥಿಗಳಿಂದ 20 ನಾಮಪತ್ರಗಳು ಸಲ್ಲಿಕೆಯಾಗಿವೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ.ವೆಂಕಟೇಶ್ ಎಂ.ವಿ ತಿಳಿಸಿದ್ದಾರೆ.

ಬಿಜೆಪಿಯಿಂದ ಜಿ.ಎಸ್.ಗಾಯತ್ರಿ 3 ನಾಮಪತ್ರ, ಜಿ.ಎಂ.ಸಿದ್ದೇಶ್ವರ ಬಿಜೆಪಿ 3 ನಾಮಪತ್ರ, ದೊಡ್ಡೇಶಿ ಹೆಚ್.ಎಸ್ ಜನಹಿತ ಪಕ್ಷ, ತಿಪ್ಪೇಸ್ವಾಮಿ ಕೆ.ಎ ಸೋಷಿಯಲ್ ಯುನಿಟಿ ಸೆಂಟರ್ ಆಫ್ ಇಂಡಿಯಾ ಪಕ್ಷದಿಂದ 2 ನಾಮಪತ್ರ, ಶ್ರೀನಿವಾಸ್ ಎಂ.ಸಿ. ಭಾರತೀಯ ಪ್ರಜೆಗಳ ಕಲ್ಯಾಣ ಪಕ್ಷ, ಕೆಆರ್‌ಎಸ್ ಪಕ್ಷದಿಂದ ಕೆ.ಎಸ್.ವೀರಭದ್ರಪ್ಪ ಉಳಿದಂತೆ ಎಲ್ಲಾ ಪಕ್ಷೇತರರಾಗಿದ್ದು ವಿನಯ್‌ಕುಮಾರ್ ಜಿ.ಬಿ ಎರಡು ನಾಮಪತ್ರ, ಪೆದ್ದಪ್ಪ ಎಸ್, ಇರ್ಫಾನುಲ್ಲಾ, ಪ್ರಸನ್ನ ಬಿ.ಆರ್, ಮೆಹಬೂಬ ಪಾಷ, ಬರ್ಕತ್ ಅಲಿಭಾಷ, ಗಾಯತ್ರಿ ಜಿ.ಎಂ.ಕೋಂ ಸಿದ್ದೇಶಿ, ಕರಣಂ ಕೊಟ್ರಪ್ಪ ನಾಮಪತ್ರ ಸಲ್ಲಿಸಿದವರು. ಇದುವರೆಗೆ ಒಟ್ಟು 40 ಅಭ್ಯರ್ಥಿಗಳಿಂದ 54 ನಾಮಪತ್ರಗಳು ಸಲ್ಲಿಕೆಯಾಗಿವೆ.

**10 ರೂ. ಮುಖಬೆಲೆಯ ನಾಣ್ಯಗಳಲ್ಲೇ ಠೇವಣಿ ಹಣ ಭರಿಸಿದ ಜನಹಿತ ಪಕ್ಷದ ದೊಡ್ಡೇಶಿ ಹೆಚ್.ಎಸ್**

**ಇಂದು ನಾಮಪತ್ರಗಳ ಪರಿಶೀಲನೆ**

ಏ.12 ರಂದು ಐದು ಅಭ್ಯರ್ಥಿಗಳಿಂದ 6 ನಾಮಪತ್ರಗಳು, ಏ.15 ರಂದು 8 ಅಭ್ಯರ್ಥಿಗಳಿಂದ 9 ನಾಮಪತ್ರಗಳು ಹಾಗೂ ಏ.16 ರಂದು 3 ಅಭ್ಯರ್ಥಿಗಳಿಂದ 3 ನಾಮಪತ್ರಗಳು, ಏ.17 ರಂದು 6 ಅಭ್ಯರ್ಥಿಗಳಿಂದ 6 ನಾಮಪತ್ರ, ಏ.18 ರಂದು 10 ಅಭ್ಯರ್ಥಿಗಳಿಂದ 10 ನಾಮಪತ್ರಗಳು ಹಾಗೂ ಕೊನೆ ದಿನ ಏ.19 ರಂದು 14 ಅಭ್ಯರ್ಥಿಗಳಿಂದ 20 ನಾಮಪತ್ರಗಳು ಸಲ್ಲಿಕೆಯಾಗಿವೆ.

ಕಾಂಗ್ರೆಸ್‌ನಿಂದ ಡಾ. ಪ್ರಭಾ ಮಲ್ಲಿಕಾರ್ಜುನ್ ನಾಲ್ಕು ನಾಮಪತ್ರ, ಬಿಜೆಪಿಯಿಂದ ಜಿ.ಎಸ್. ಗಾಯತ್ರಿ 4, ಬಿಜೆಪಿಯಿಂದ ಜಿ.ಎಂ.ಸಿದ್ದೇಶ್ವರ 3, ಕೆಆರ್‌ಎಸ್ ಪಕ್ಷದ ರಾಘವೇಂದ್ರ ಜಿ.ಪಿ 2, ಸೋಷಿಯಲ್ ಯುನಿಟಿ ಸೆಂಟರ್ ಆಫ್ ಇಂಡಿಯಾ ಪಕ್ಷದಿಂದ ತಿಪ್ಪೇಸ್ವಾಮಿ ಕೆ.ಎ 3 ನಾಮಪತ್ರ, ಪಕ್ಷೇತರರಾಗಿ ವಿನಯ್‌ಕುಮಾರ್ ಜಿ.ಬಿ. 4 ನಾಮಪತ್ರ ಸಲ್ಲಿಸಿದ್ದಾರೆ.

# ಮೂರು ದಿಕ್ಕುಗಳಿಂದ ಸಾಗಿ ಬಂದ ಕೇಸರಿ ಪಡೆ




**(3ನೇ ಪುಟದಿಂದ)** ಅಜಯ್ ಕುಮಾರ್, ಚಿತ್ರ ನಟಿ ಶೃತಿ, ಗಾಯಕ ಚಂದನ್ ಶೆಟ್ಟಿ, ಮುಖಂಡರಾದ ಮಾಡಾಳ್ ಮಲ್ಲಿಕಾರ್ಜುನ್, ಒಬಿಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಶಿವಕುಮಾರ್ ರಾಜನಹಳ್ಳಿ, ಎಸ್ಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಧನಂಜಯ್ ಕಡ್ಲೇಬಾಳು, ಅನಿಲ್ ಕುಮಾರ್ ನಾಯ್ಕ್, ಐರಣಿ ಅಣ್ಣೇಶ್, ರೈತ ಮೋರ್ಚಾ ರಾಜ್ಯ ಉಪಾಧ್ಯಕ್ಷ ಲೋಕಿಕೆರೆ ನಾಗರಾಜ್, ತುಮ್ಕೋಸ್ ಮಾಜಿ ಅಧ್ಯಕ್ಷ ಹೆಚ್.ಎಸ್.ಶಿವಕುಮಾರ್, ಚಂದ್ರಶೇಖರ್ ಪೂಜಾರ್, ಮಾಜಿ ಮುಖ್ಯ ಸಚೇತಕರಾದ ಎ.ಹೆಚ್. ಶಿವಯೋಗಿಸ್ವಾಮಿ, ಜೆಡಿಎಸ್ ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್, ಜೆಡಿಎಸ್ ಜಿಲ್ಲಾಧ್ಯಕ್ಷ ಚಿ.ಚಿದಾನಂದಪ್ಪ, ಚುನಾವಣಾ ಸಂಚಾಲಕ ವೀರೇಶ್ ಹನಗವಾಡಿ ಮತ್ತಿತರರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

## 'ಗರೀಬಿ ಹಟಾವೋ' ಮಾಡಿದ್ದು ಮೋದಿ

**(3ನೇ ಪುಟದಿಂದ)** ಕರೆದುಕೊಂಡು ಹೋಗುತ್ತದೆ. ಆದರೆ, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ವೋಟಿನ ರಾಜಕೀಯಕ್ಕಾಗಿ ಧರ್ಮವನ್ನು ಹತ್ತಿಕ್ಕುವ ಕೆಲಸ ಮಾಡುತ್ತಿದೆ ಎಂದು ಟೀಕಿಸಿದರು.

ಅವರು ಸಲಿಗೆ ಕೊಟ್ಟ ಕಾರಣಕ್ಕೆ ವಿಧಾನಸೌಧದಲ್ಲಿ ಪಾಕಿಸ್ತಾನಕ್ಕೆ ಜಯ ಘೋಷ ಕೇಳಿ ಬಂದಿದೆ. ರಾಮ ನವಮಿಯಂದು ಜೈ ಶ್ರೀರಾಮ್ ಎನ್ನಬಾರದು ಎನ್ನುತ್ತಾರೆ. ಇದಕ್ಕೆ ಕಾಂಗ್ರೆಸ್ ಅನುಕೂಲ ಮಾಡಿಕೊಟ್ಟಿದೆ. ಕೇವಲ ಮತಕ್ಕಾಗಿ ಒಂದು ಧರ್ಮವನ್ನು ಓಲೈಸಿ, ನಮ್ಮ ನಡುವೆ ಒಡಕು ತರುತ್ತಿದೆ ಎಂದು ಆರೋಪಿಸಿದರು. ನಾರಿಯರು ಈ ದೇಶ ಮುನ್ನಡೆಸಬೇಕು ಎಂಬುದು ಮೋದಿ ಆಸೆ. ಇದಕ್ಕಾಗಿಯೇ ವಿಧಾನಸಭೆ ಹಾಗೂ ಲೋಕಸಭೆಯಲ್ಲಿ ಮಹಿಳೆಯರಿಗೆ ಶೇ.33 ರಷ್ಟು ಸ್ಥಾನ ಕಲ್ಪಿಸುವ ಶಾಸನ ಜಾರಿಗೆ ತಂದಿದ್ದಾರೆ ಎಂದು ಶ್ರುತಿ ಹೇಳಿದರು.

## ಹೆಚ್ಚುವರಿ ಅಭ್ಯರ್ಥಿಯಾಗಿ ಜಿ.ಎಂ. ಸಿದ್ದೇಶ್ವರ




**ಸಂಸದ ಜಿ.ಎಂ. ಸಿದ್ದೇಶ್ವರ ಅವರು ಬಿಜೆಪಿಯ ಹೆಚ್ಚುವರಿ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದಾರೆ. ಅವರೊಂದಿಗೆ ಶಾಸಕ ಜಿ. ಜನಾರ್ದನ ರೆಡ್ಡಿ, ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ, ಮಾಜಿ ಶಾಸಕರಾದ ಬಸವರಾಜನಾಯ್ಕ ಹಾಗೂ ಎಸ್.ವಿ. ರಾಮಚಂದ್ರ ಅವರಿದ್ದರು. ಗಾಯತ್ರಿ ಸಿದ್ದೇಶ್ವರ ಅವರು ಬಿಜೆಪಿಯ ಅಭ್ಯರ್ಥಿಯಾಗಿದ್ದಾರೆ. ಮುನ್ನೆಚ್ಚರಿಕೆ ದೃಷ್ಟಿಯಿಂದ ಹೆಚ್ಚುವರಿ ಅಭ್ಯರ್ಥಿಯಾಗಿ ಸಿದ್ದೇಶ್ವರ ನಾಮಪತ್ರ ಸಲ್ಲಿಸಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.**

## ಅಭಿವೃದ್ಧಿ, ಮೋದಿ ಹವಾ : ಗಾಯತ್ರಿ

ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ ಅವರು ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳು ಹಾಗೂ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಹವಾ ಎರಡೂ ಇದೆ. ಜನ ಬಿಜೆಪಿ ಪರ ಮತ ಚಲಾಯಿಸಲು ಉತ್ಸಾಹ ಹೊಂದಿದ್ದಾರೆ ಎಂದು ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ್ ಹೇಳಿದ್ದಾರೆ. ಶುಕ್ರವಾರ ಎರಡು ಸೆಟ್ ನಾಮಪತ್ರ ಸಲ್ಲಿಕೆಯ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕ್ಷೇತ್ರದ ಎಲ್ಲೂ ನಕಾರಾತ್ಮಕತೆ ಕಂಡು ಬಂದಿಲ್ಲ. ಎಲ್ಲೆಡೆ ಬಿಜೆಪಿ ಪರ ಉತ್ಸಾಹ ಇದೆ ಎಂದು ಹೇಳಿದರು.

## ಕಣದಲ್ಲಿ ಎರಡನೇ ಗಾಯತ್ರಿ !

**ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ಪಕ್ಷೇತರ ಅಭ್ಯರ್ಥಿಯಾಗಿ ಜೆ.ಎಂ. ಗಾಯತ್ರಿ ಎಂಬುವವರು ನಾಮಪತ್ರ ಸಲ್ಲಿಸಿದ್ದಾರೆ. ಇವರು ಜಗಳೂರು ತಾಲ್ಲೂಕಿನ ಗೊಡೆ ಗ್ರಾಮದವರು. ವಿಶೇಷವೆಂದರೆ, ಅವರ ಪತಿಯ ಹೆಸರು ಜಿ.ಎಂ. ಸಿದ್ದೇಶಿ ಆಗಿದೆ. ಬಿಜೆಪಿ ಅಭ್ಯರ್ಥಿಯಾಗಿ ಗಾಯತ್ರಿ ಸಿದ್ದೇಶ್ವರ ಅವರು ಈಗಾಗಲೇ ನಾಮಪತ್ರ ಸಲ್ಲಿಸಿದ್ದಾರೆ.**

**ಮನಮೋಹನ್ ಸಿಂಗ್ ಆಡಳಿತದಲ್ಲಿ ಆರ್ಥಿಕತೆಯಲ್ಲಿ 14ನೇ ಸ್ಥಾನದಲ್ಲಿದ್ದ ಭಾರತ, ಈಗ ಐದನೇ ಸ್ಥಾನಕ್ಕೆ ಬಂದಿದೆ. ಹಿಂದಿನ ಕಾಂಗ್ರೆಸ್ ಆಡಳಿತ ಹಾಗೂ ಈಗಿನ ನರೇಂದ್ರ ಮೋದಿ ಆಡಳಿತದಲ್ಲಿ ಅಜಗಜಾಂತರ ವ್ಯತ್ಯಾಸ ಇದೆ.**

**- ಮಾಜಿ ಸಚಿವ ಮುರುಗೇಶ್ ನಿರಾಣಿ**

**ಭಾರತ ವಿಶ್ವದಲ್ಲೇ ಮೊದಲ ಸ್ಥಾನಕ್ಕೆ ಬರಬೇಕೆಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಗುರಿ ಹೊಂದಿದ್ದಾರೆ. ಮೋದಿ ಮೂರನೇ ಬಾರಿ ಪ್ರಧಾನಿಯಾಗುವ ಜೊತೆಗೆ, ದಾವಣಗೆರೆಯಲ್ಲೂ ಬಿಜೆಪಿ ಗೆದ್ದು ಪ್ರಗತಿಯಲ್ಲಿ ಸಹಭಾಗಿ ಆಗಬೇಕು.**

**- ಮಾಜಿ ಸಚಿವ ಕೆ. ಕರುಣಾಕರ ರೆಡ್ಡಿ**

## ಅಡುಗೆಗೂ ಸೈ... ಆಡಳಿತಕ್ಕೂ ಸೈ...

ಬಿಜೆಪಿಯ ಬೃಹತ್ ಮೆರವಣಿಗೆಯಲ್ಲಿ ನಾರಿ ಶಕ್ತಿ ಪ್ರಮುಖವಾಗಿ ಬಿಂಬಿಸಲಾಗಿತ್ತು. 'ಅಡುಗೆಗೂ ಸೈ... ಆಡಳಿತಕ್ಕೂ ಸೈ...' ಎಂಬ ಘೋಷಣೆ ಹೊಂದಿದ್ದ ವಾಹನ ರೂಪಿಸಲಾಗಿತ್ತು. ಇದರ ಮೇಲೆ ವಿವಿಧ ಸಾಧಕಿಯರ ವೇಷ ಧರಿಸಿದ್ದ ಮಹಿಳೆಯರಿದ್ದರು. ಮಹಿಳಾ ಮೋರ್ಚಾದ ಸದಸ್ಯರು ಸೈನಾ ನೆಹ್ವಾಲ್, ಸುನೀತಾ ವಿಲಿಯಮ್ಸ್, ಸಾಲು ಮರದ ತಿಮ್ಮಕ್ಕ, ಒನಕೆ ಓಬವ್ವ, ಕಿತ್ತೂರು ಚೆನ್ನಮ್ಮ ಕಿರಣ್ ಬೇಡಿ, ಅಕ್ಕಮಹಾದೇವಿ ಮುಂತಾದ ಮುಂತಾದ ಸಾಧಕಿಯರ ವೇಷಧಾರಿಗಳಾಗಿದ್ದು ಗಮನ ಸೆಳೆಯಿತು. ಮೆರವಣಿಗೆಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ವೇಷಧಾರಿ ಜನರ ಕಡೆ ಕೈ ಬೀಸುತ್ತಾ ಗಮನ ಸೆಳೆದರು. ಜೂನಿಯರ್ ಮೋದಿ ಮತದಾರರನ್ನು ಭೇಟಿ ಮಾಡಿ ಮತ ಯಾಚನೆಯನ್ನೂ ಮಾಡಿದರು.

ಗಾಯಕ ಚಂದನ್ ಶೆಟ್ಟಿ ಅವರು ಬಿಜೆಪಿ ಪರ ಹಾಡುಗಳನ್ನು ಹಾಡಿ ಉತ್ಸಾಹ ಮೂಡಿಸುತ್ತಿದ್ದರು. ರೋಡ್ ಶೋನಲ್ಲಿ ಬಿಜೆಪಿ ಹಾಗೂ ಜೆಡಿಎಸ್‌ಗಳ ಬಾವುಟಗಳನ್ನು ಹಿಡಿದು ಕಾರ್ಯಕರ್ತರು ಉತ್ಸಾಹದಿಂದ ಘೋಷಣೆ ಕೂಗುತ್ತಿದ್ದರು. ಕೆಲವರು ಎರಡೂ ಪಕ್ಷಗಳ ಬಾವುಟ ಹಿಡಿದು ಸಮ್ಮಿಳನದ ಸೂಚನೆ ನೀಡುತ್ತಿದ್ದರು.



# ಶೇ.63 ರಷ್ಟು ಮತದಾನ

**(3ನೇ ಪುಟದಿಂದ)** ಆರೋಪಗಳ ಮೇಲೆ ದೂರುಗಳು ದಾಖಲಾಗಿವೆ.

ಹಿಂಸಾ ಪೀಡಿತ ಮಣಿಪುರದಲ್ಲಿ ಶೇ.69.13ರಷ್ಟು ಮತದಾನವಾಗಿದೆ. ಒಳ ಮಣಿಪುರದ ಥೌಬಲ್ ಜಿಲ್ಲೆಯ ವಾಂಗ್‌ಖೆಮ್‌ನಲ್ಲಿ ಅತಿ ಹೆಚ್ಚಿನ ಶೇ.82.41ರಷ್ಟು ಮತದಾನವಾಗಿದೆ. ಹೊರ ಮಣಿಪುರದ ಚಂದೇಲ್‌ನಲ್ಲಿ ಶೇ.85.54ರಷ್ಟು ಮತದಾನವಾಗಿದೆ. ಒಳ ಮಣಿಪುರ ಕ್ಷೇತ್ರದ ಹಲವೆಡೆ ಗುಂಡಿನ ದಾಳಿ ಹಾಗೂ ಬೆದರಿಕೆಯ ಘಟನೆಗಳ ವರದಿಗಳೂ ಬಂದಿವೆ.

ಛತ್ತೀಸ್‌ಘಡದ ನಕ್ಸಲ್ ಪೀಡಿತ ಬಸ್ತಾರ್ ಲೋಕಸಭಾ ಕ್ಷೇತ್ರದಲ್ಲಿ ಶೇ.63.14ರ ಮತದಾನವಾಗಿದೆ. ಆಕಸ್ಮಿಕವಾಗಿ ಗ್ರೆನೇಡ್ ಸ್ಫೋಟಿಸಿ ಸಿ.ಆರ್.ಪಿ.ಎಫ್. ಸೈನಿಕರೊಬ್ಬರು ಸಾವನ್ನಪ್ಪಿದ್ದಾರೆ ಹಾಗೂ ಅಧಿಕಾರಿಯೊಬ್ಬರು ಗಾಯಗೊಂಡಿದ್ದಾರೆ.

ಇದೇ ಮೊದಲ ಬಾರಿಗೆ ಲೋಕಸಭಾ ಚುನಾವಣೆಯಲ್ಲಿ ಬಸ್ತಾರ್‌ನ 56 ಹಳ್ಳಿಗಳವರು ತಮ್ಮ ಗ್ರಾಮಗಳ ಮತಗಟ್ಟೆಗಳಲ್ಲೇ ಮತ ಚಲಾಯಿಸಿದ್ದಾರೆ.

ತಮಿಳುನಾಡಿನ ಎಲ್ಲಾ 39 ಕ್ಷೇತ್ರಗಳಿಗೆ ಮತದಾನ ನಡೆದಿದ್ದು, ಶೇ.65.19ರ ಮತದಾನವಾಗಿದೆ.

ಅರುಣಾಚಲ ಪ್ರದೇಶದಲ್ಲಿ 67.15ರಷ್ಟು ಮತದಾನವಾಗಿದೆ. ಮತಯಂತ್ರಗಳ ಲೋಪಗಳ ಕಾರಣದಿಂದಾಗಿ ರಾಜ್ಯದ ಹಲವೆಡೆ ಮತದಾನ ವಿಳಂಬವಾಗಿತ್ತು. ಪೂರ್ವ ಕಮೆಂಗ್, ಕುರುಂಗ್ ಕುಮೆ ಹಾಗೂ ಅಪ್ಪರ್ ಸುಬಾನ್ಸಿರಿ ಜಿಲ್ಲೆಗಳಲ್ಲಿ ಮತಯಂತ್ರಗಳಿಗೆ ಹಾನಿ ಮಾಡಿದ ಘಟನೆಗಳು ನಡೆದಿವೆ.

ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ಶೇ.56.87ರಷ್ಟು ಮತದಾನವಾಗಿದೆ. ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಶೊಂಪೆನ್ ಬುಡಕಟ್ಟಿನ ಏಳು ಜನ ಮತದಾನ ಮಾಡಿದ್ದಾರೆ.

ಬಿಹಾರದಲ್ಲಿ ಶೇ.48.50ರಷ್ಟು ಮತದಾನವಾಗಿದೆ. ಬಿರು ಮಳೆಯ ನಡುವೆಯೂ ಜಮ್ಮು ಮತ್ತು ಕಾಶ್ಮೀರದಲ್ಲಿ ಶೇ.65.08ರಷ್ಟು ಮತದಾನವಾಗಿದೆ. ರಾಜಸ್ಥಾನದಲ್ಲಿ ಶೇ.56.58 ಹಾಗೂ ಉತ್ತರಾಖಂಡದಲ್ಲಿ ಶೇ.54.06ರಷ್ಟು ಮತದಾನವಾಗಿದೆ.

ಮಹಾರಾಷ್ಟ್ರದಲ್ಲಿ ಶೇ.55.35 ಹಾಗೂ ಮಧ್ಯ ಪ್ರದೇಶದಲ್ಲಿ ಶೇ.64.77ರಷ್ಟು ಮತದಾನವಾಗಿದೆ. ಉತ್ತರ ಪ್ರದೇಶದಲ್ಲಿ ಶೇ.58.49, ಮಿಜೋರಾಂನಲ್ಲಿ ಶೇ.57.23, ನಾಗಾಲ್ಯಾಂಡ್‌ನಲ್ಲಿ ಶೇ.56.91 ಹಾಗೂ ಸಿಕ್ಕಿಂನಲ್ಲಿ ಶೇ.69.47ರ ಮತದಾನವಾಗಿದೆ.

# ಊಟದ ವಿಷಯದಲ್ಲಿ ಸಣ್ಣತನ

**(3ನೇ ಪುಟದಿಂದ)** ಕಳಿಸಲಾಗಿದೆ. ಇದರಲ್ಲಿ ಮೂರು ಬಾರಿ ಮಾತ್ರ ಮಾವಿನ ಹಣ್ಣು ಕಳಿಸಲಾಗಿದೆ. ಏಪ್ರಿಲ್ 8ರ ನಂತರ ಮಾವಿನ ಹಣ್ಣು ಕಳಿಸಿಲ್ಲ. ಮಾವಿನ ಹಣ್ಣುಗಳೇನೂ ಸಕ್ಕರೆ ಗುಂಡುಗಳಲ್ಲ. ಅವುಗಳಲ್ಲಿನ ಸಕ್ಕರೆ ಅಂಶ ಅಕ್ಕಿಗಿಂತ ಕಡಿಮೆ ಇರುತ್ತದೆ ಎಂದು ಸಿಂಘ್ವಿ ಹೇಳಿದರು. ಕೇಜ್ರಿವಾಲ್ ಶುಗರ್ ಫ್ರೀ ಬ್ರಾಂಡ್‌ನ ಚಹಾ ಸೇವಿಸುತ್ತಿದ್ದಾರೆ ಜಾರಿ ನಿರ್ದೇಶ ನಾಲಯ ಕ್ಷುಲ್ಲಕ, ರಾಜಕೀಯ ಹಾಗೂ ಹಾಸ್ಯಾಸ್ಪದವಾಗಿ ವರ್ತಿಸುತ್ತಿದೆ ಎಂದು ಸಿಂಘ್ವಿ ಹೇಳಿದ್ದಾರೆ.

## ರಾಮ ಮಂದಿರ ಈಗ ಮುಗಿದ ವಿಷಯ : ಶರದ್ ಪವಾರ್

ಪುಣೆ, ಏ. 19 – ಅಯೋಧ್ಯೆಯ ರಾಮ ಮಂದಿರದ ವಿಷಯ ಈಗ ಯಾರೂ ಚರ್ಚಿಸುತ್ತಿಲ್ಲ. ಅಯೋಧ್ಯೆ ವಿಷಯ ಈಗ ಮುಗಿದಿದೆ ಎಂದು ಎನ್.ಸಿ.ಪಿ. (ಎಸ್.ಪಿ.) ಅಧ್ಯಕ್ಷ ಶರದ್ ಪವಾರ್ ಹಳಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಅಯೋಧ್ಯೆಯಲ್ಲಿ ರಾಮ ದೇವರ ಮೂರ್ತಿ ಸ್ಥಾಪಿಸಲಾಗಿದೆಯಾದರೂ, ಸೀತಾ ದೇವಿಯ ಮೂರ್ತಿ ಇಲ್ಲ ಎಂದು ಕೆಲ ಮಹಿಳೆಯರು ಆಕ್ಷೇಪಿಸುತ್ತಿದ್ದಾರೆ ಎಂದಿದ್ದಾರೆ.

## ಸೊಕ್ಕೆ ಶಿರಡಿ ಸಾಯಿಬಾಬಾ ದೇವಸ್ಥಾನಕ್ಕೆ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಭೇಟಿ

ಜಗಳೂರು, ಏ. 19 - ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಸೊಕ್ಕೆ ಗ್ರಾಮದ ಶ್ರೀ ಶಿರಡಿ ಸಾಯಿಬಾಬಾ ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ, ಬಾಬಾರವರ ಆಶೀರ್ವಾದ ಪಡೆದರು.

ನಂತರ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಸ್ವಾತಿ ಅವರು ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರವರಿಗೆ ಸನ್ಮಾನಿಸಿ, ಗೌರವಿಸಿದರು. ಈ ಸಂದರ್ಭದಲ್ಲಿ ಇಂದಿರಾ ರಾಮಚಂದ್ರ, ಜಯಮ್ಮ ಸೇರಿದಂತೆ ಗ್ರಾಮದ ಬಿಜೆಪಿ ಮುಖಂಡರು ಇದ್ದರು.




**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
29ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಮಾರ್ಚ್ 23 ರಿಂದ 2 ತಿಂಗಳ ಕಾಲ.
ಇಂದಿನ ಮಜ್ಜಿಗೆ ಪ್ರಾಯೋಜಕರು :-
ದಿ. ಬಾಲನಾಗು ವೆಂಕಟರಾಜು ಜ್ಞಾಪಕಾರ್ಥವಾಗಿ
ಕುಟುಂಬ ವರ್ಗದವರ ಸೇವಾರ್ಥ
ಸ್ಥಳ : ಮಹಾನಗರ ಪಾಲಿಕೆ ಆವರಣ

**ತಕ್ಷಣ ಬೇಕಾಗಿದ್ದಾರೆ**
DTDC ಕೊರಿಯರ್ ಆಫೀಸ್‌ನಲ್ಲಿ Part time ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಮಯ : ಸಂಜೆ 7 ರಿಂದ ರಾತ್ರಿ 12ರವರೆಗೆ
ಮೊ. 97385-23711

**ಸೈಟುಗಳು ಮಾರಾಟಕ್ಕಿವೆ**
ಹೊಸ ಕುಂದವಾಡ ಹತ್ತಿರ, ಸುಶಿ ಕನ್ವೆನ್ಷನ್ ಹಾಲ್ ಹಿಂಭಾಗ ಹೊಸ ಬಡಾವಣೆಗಳಲ್ಲಿ 30x40 ಪಶ್ಚಿಮ, 30x50 ಉತ್ತರ, 30x40 ಪಶ್ಚಿಮ ಅಕ್ಕ-ಪಕ್ಕ 30x50 ಪೂರ್ವ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**DXN ಹೆಲ್ತ್ ಕೇರ್ ಆರ್ಗ್ಯಾನಿಕ್ ಪ್ರಾಡಕ್ಟ್ಸ್**
ಕ್ಯಾನ್ಸರ್ ಬರುವಿಕೆಯನ್ನು ತಡೆಯಲು, ಕಾಯಿಲೆ ಮುಕ್ತ ಆರೋಗ್ಯಕರ ಜೀವನಶೈಲಿಗೆ DXN ಉತ್ಪನ್ನಗಳನ್ನು ಬಳಸಿ.
ವಿಳಾಸ : ಪಿ.ಜೆ.ಬಡಾವಣೆ, 8ನೇ ಮೇನ್, 7ನೇ ಕ್ರಾಸ್, ದಾವಣಗೆರೆ.
ಮೊ : 9916933905

**ಕಾರುಗಳು ಮಾರಾಟಕ್ಕಿವೆ**
Maruthi Alto Lxi 2 ಲಕ್ಷಕ್ಕೆ
Honda City 3 ಲಕ್ಷಕ್ಕೆ
Volkswagen Vento 4.8 ಲಕ್ಷಕ್ಕೆ
Renault Duster RXL 4.8 ಲಕ್ಷಕ್ಕೆ
ದೈವಿಕ್ ಐನಳ್ಳಿ
99456 43223

**ಪ್ರಾಪರ್ಟಿ ಹಬ್**
ಇ ಸಿ
ಇ – ಸ್ವತ್ತು
ಕಟ್ಟಡ ಲೈಸೆನ್ಸ್
ಖಾತೆ ಬದಲಾವಣೆ
96118 66449

**WANTED**
OM DENTAL CARE
Ram & Co Circle, Davangere.
1) BDS Dentist
2) Staff
(Full time & Part Time)
90669 93738

**ಸೈಟ್, ಮನೆ ಮಾರಾಟಕ್ಕಿವೆ**
(2400 sqft) ಡಾಲರ್ಸ್ ಕಾಲೋನಿ ಮನೆ 30x50, ಪಶ್ಚಿಮ, ಡಾಲರ್ಸ್ ಕಾಲೋನಿ ಸೈಟ್ 40x51 ಪಶ್ಚಿಮ, ಹಳೇ ಕುಂದವಾಡ ಸೈಟ್ 30x50 ಪಶ್ಚಿಮ
91481 25125

**ಸೈಟುಗಳು ಮಾರಾಟಕ್ಕಿದೆ**
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜು ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪಶ್ಚಿಮ ಅಕ್ಕ-ಪಕ್ಕ 30x40 ಪೂರ್ವ, 30x40 ದಕ್ಷಿಣ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಹೊಸ ಮನೆ ಮಾರಾಟಕ್ಕಿದೆ**
ಶಿವಗಂಗಾ ಕಲ್ಯಾಣ ಮಂಟಪದ ಹತ್ತಿರ ಮಹಾಲಕ್ಷ್ಮಿ ಲೇಔಟ್‌ನಲ್ಲಿ 30x50 ಪಶ್ಚಿಮಕ್ಕೆ ಹೊಸ ಮನೆ ಮಾರಾಟಕ್ಕಿದೆ.
97425 12125

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**TUITIONS**
IGCSE, ICSE, CBSE and State Board from class 5th to 12th MCC A Block
98444 92888

**ಕಲ್ಯಾಣ ಬೆಳಕು ವಧು-ವರ ವೇದಿಕೆ**
ಜಂಗಮ ಮತ್ತು ಲಿಂಗಾಯತ ವಧು-ವರರ ಆನ್‌ಲೈನ್ ವೇದಿಕೆ - ಪ್ರವೇಶ ಶುಲ್ಕ ರೂ. 500/- ನಮ್ಮ ಗ್ರೂಪ್‌ಗಳಿಂದ ಮದುವೆ ನಿಶ್ಚಯವಾದರೆ ಯಾವುದೇ ಶುಲ್ಕ ಇರುವುದಿಲ್ಲ.
78291 46919

**ಸೈಟು ಮಾರಾಟಕ್ಕಿದೆ**
35x50 ಅಳತೆಯ ಸೈಟ್ ನಂ. 6, ಅಮರಾವತಿ ಬಡಾವಣೆ, ಆರ್ಕ್ ಗೇಟ್ ಹತ್ತಿರ, ಅಮರಾವತಿ ರಸ್ತೆ, 4ನೇ ಕ್ರಾಸ್, ಹರಿಹರ ಇಲ್ಲಿ ಸೈಟ್ ಮಾರಾಟಕ್ಕಿದೆ. (1750/- ಚದುರಅಡಿ ) ಮಧ್ಯಾಹ್ನ 3 ಗಂಟೆಯ ನಂತರ ಸಂಪರ್ಕಿಸಿ.
98452 36274

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬೇಕಾಗಿದ್ದಾರೆ**
ಖಾನಾವಳಿಯಲ್ಲಿ ಕೆಲಸ ಮಾಡಲು ಹುಡುಗ/ಹುಡುಗಿಯರು ಬೆಳಿಗ್ಗೆ 9.30 ರಿಂದ ಸಂ. 6.50ರವರೆಗೆ ಪಾರ್ಟ್ ಟೈಂ ಕೆಲಸಕ್ಕೆ ಸಂ. 6.00 ರಿಂದ ರಾ. 10.30ವರೆಗೆ
99012 36631

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಬಿಲ್ಲಿಂಗ್ ಮಾಡಲು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ :
90367 34919

**ನೀರಾವರಿ ಜಮೀನು ಮಾರಾಟಕ್ಕಿದೆ**
ದಾವಣಗೆರೆಯಿಂದ 7 ಕಿ.ಮೀ. ದೂರದ ಕೊಂಡಜ್ಜಿ ರೋಡ್, ಆವರಗೊಳ್ಳ ರಸ್ತೆ ಪಕ್ಕದಲ್ಲಿ, 120 ಅಡಿ ಸಿಮೆಂಟ್ ರಸ್ತೆಗೆ ಹೊಂದಿಕೊಂಡಿರುವ 34 ಗುಂಟೆ (ಸಿಂಗಲ್ ಓನರ್ ಜನರಲ್ ಪ್ರಾಪರ್ಟಿ) ನೀರಾವರಿ ಜಮೀನು ಮಾರಾಟಕ್ಕಿದೆ.
70190 73296

**ಸೈಟ್, ಮನೆ, ಹೊಲ ಬೇಕಾದಲ್ಲಿ ಸಂಪರ್ಕಿಸಿ**
ಸರ್ಕಾರಿ ನೌಕರರ ಬಡಾವಣೆ, ಬಿ ಬ್ಲಾಕ್ 30x50 2 ಸೈಟ್, ಪೂರ್ವ, 30x40 ಪೂರ್ವ, ಎಸ್.ಎಸ್. ಬಡಾವಣೆ, ಬಿ ಬ್ಲಾಕ್‌ನಲ್ಲಿ 40x60 ದಕ್ಷಿಣ, ಶ್ರೀ ಸಾಮಾನ್ಯದಲ್ಲಿ 30x43 40 ಅಡಿ ರಸ್ತೆಗೆ ಉತ್ತರ, 30x40 ಉತ್ತರ, ಬೈಪಾಸ್ ಸರ್ವೀಸ್ ರಸ್ತೆಗೆ 30x55 (ಕಮರ್ಷಿಯಲ್) ಸೈಟ್‌ಗಳು ಮಾರಾಟಕ್ಕಿವೆ.
ಸುರೇಶ್ ಪಿ.ಎಸ್, 84314 00907

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ 2 ವರ್ಷ
ವಿದ್ಯಾರ್ಹತೆ : SSLC/PUC PASS or FAIL
ಶ್ರೀ ಗಂಗೋತ್ರಿ ಹೆಲ್ತ್ ಅಲೈಡ್ ಕಾಲೇಜ್
ಗಾಂಧಿ ಸರ್ಕಲ್ ಹತ್ತಿರ, ಮೋತಿ ಸ್ವೀಟ್ಸ್/ಟ್ರೆಂಡ್ಸ್ ಪಕ್ಕ, ದಾವಣಗೆರೆ.
86602 35013

**ಬೇಕಾಗಿದ್ದಾರೆ**
ದಾವಣಗೆರೆ ಸೇರಾಕೇರ್ ಹೆಲ್ತ್‌ಕೇರ್‌ನಲ್ಲಿ ಕೆಲಸ ಮಾಡಲು ಯುವತಿಯರು ಮತ್ತು ಮಹಿಳೆಯರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC, PUC, Any Degree, ವಯೋಮಿತಿ 18 ರಿಂದ 30 ವರ್ಷ ಒಳಪಟ್ಟವರು
7259875931, 9538700996

**ಸ್ಪೋಕನ್ ಇಂಗ್ಲೀಷ್ ಕಂಪ್ಯೂಟರ್ ಅಕಾಡೆಮಿ**
33 ದಿನಗಳಲ್ಲಿ ಇಂಗ್ಲೀಷ್ ಕಲಿಯಿರಿ
ವಿಕಾಸ್ ಅಕಾಡೆಮಿ - ದಾವಣಗೆರೆ
93802 29199
97399 22225

**ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ**
ದಾವಣಗೆರೆ ಸುತ್ತಮುತ್ತಲಿನ ಪ್ರದೇಶದಲ್ಲಿ ಹಾಗೂ ಹರಿಹರದಲ್ಲಿ ಊಟ ಮತ್ತು ESI and PF ಇವೆ.
79755 54650, 8660398210

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಮಹಿಳಾ ನರ್ಸ್ ಬೇಕಾಗಿದ್ದಾರೆ. ಸಮಯ : ಬೆಳಿಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ.
ಸಂಪರ್ಕಿಸಿ
98808 51871

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಸಾಯಿ ಎಗ್ ಸೆಂಟರ್
ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ.
96860 22969

**WANTED**
We are Hirnig telecallers
Good Communication Skill.
Required : (Only for Girls, Womens)
Salary : 6000, 7000 (Under Graduates)
Salary : 8000, 9000, 10,000 (Post Graduates)
Contact : 95350 51589, 78670 75786
Office Location : Hasbahavi Circle, K.R Market, Davangere.

**ಮನೆ ಬಾಡಿಗೆಗೆ ಇದೆ**
ಹೊಂಡದ ಸರ್ಕಲ್‌ನ ಖಂಡಪ್ಪನ ಗಲ್ಲಿಯಲ್ಲಿ 13x45 ಅಳತೆಯ ಒಂದನೇ ಮಹಡಿ ಮನೆ ಸೋಲಾರ್, ನೀರು ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ.
94480 47506

**Summer Holidays Tuitions**
CBSE & State board - LKG to PU
Grammar & spoken English.
Hand Writing & basic knowledge
SINCHANA ACADEMY
Ram & Co Circle, Davangere.
9019580600 88614 45913

**OFFICE SPACE FOR RENT**
1, 2 & Basement Floor, (1000Sqft + Lift) ATM / Mobiles Shop Space, PB Road, Opp, RH Office Dvg.
99646 99096

**ಹೋಟೆಲ್ ಕೆಲಸಕ್ಕೆ ಸ್ಟಾಫ್ ಬೇಕಾಗಿದ್ದಾರೆ**
* ಸಪ್ಲೈಯರ್, ವೇಟರ್ ((waiter) & ಕ್ಲೀನರ್ * ಕುಕ್‌ನಾರ್ತ್ ಇಂಡಿಯನ್ (North indian ತಂದೂರ್ & ಫ್ರೈಪ್ಯಾನ್
ಊಟ ಮತ್ತು ವಸತಿ ಹಾಗೂ ಆಕರ್ಷಕ ಸಂಬಳ
96118 88565

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**FOR SALE / JD**
10,000 sqft Corner site in 4th main Vinobhanagar 1km from PB Road, 1 km from Ring road, Sale 5cr / Joint Venture. Contact :
98451 90787, 98807, 35505, 98456 98181

**REQUIRED**
Site Supervisor for RR Nagar Bangalore
Experience 1 to 2 years
89519 38228

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾ ಸೆಟ್, Duroflex Bed, ಕಿಟಕಿಗೆ ಅಲ್ಯುಮಿನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು.
Swapan Cushion Work
Behind Vital Temple
Maharaj Pet, Davanagere
98445 81966

**ಅಧಿಕೃತ ಚೀಟಿ ಸಂಸ್ಥೆ**
ರೂ. 5 ಲಕ್ಷ ಚೀಟಿ ಪ್ರಾರಂಭ.
50 ಸದಸ್ಯರು 6500ರೂ. ರಿಂದ 10,000 ರೂ. ವರೆಗೆ
ಸ್ಕಂದ ಚಿಟ್ ಫಂಡ್ಸ್ (ರಿ)
78997 75159

**WANTED**
Billing Staff (Tally) And Accountant With 1-2 Years Experience For Pulses,Rice And Foodgrain Shop. Immediate Joining. Knowledge Of GST Will Be Prefered. Good Salary Will Be Offered. Send Resume By Whatsap To
98440 78802

ಶ್ರೀ ದುಗ್ಗಮ್ಮ ದೇವಿ ಪ್ರಸನ್ನ
**ಟಗರು ಮಾರಾಟಕ್ಕಿದೆ**
ನೇರ ರೈತರಿಂದ ಮಾರಾಟ 2 ಹಲ್ಲು, 4 ಹಲ್ಲಿನ ಟಗರುಗಳು ಸಿಗುತ್ತವೆ. ಯಾವುದೇ ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿ.
80883 67539, 97390 63544

**ಬೇಕಾಗಿದ್ದಾರೆ**
ಕ್ಲಿನಿಕ್‌ನಲ್ಲಿ ಕೆಲಸ ಮಾಡಲು ಯುವತಿಯರು ಬೇಕಾಗಿದ್ದಾರೆ. 10ನೇ ತರಗತಿ ಅಥವಾ ದ್ವಿತೀಯ ಪಿಯುಸಿ (12th) ಉತ್ತೀರ್ಣರಾಗಿರಬೇಕು. ಇಂಗ್ಲೀಷ್ ಓದುವ ಮತ್ತು ಬರೆಯುವ ಅನುಭವವುಳ್ಳವರಾಗಿರಬೇಕು. 30 ವರ್ಷ ವಯಸ್ಸಿನವರಾಗಿರಬೇಕು.
ಸಂಪರ್ಕಿಸಿ : 6363684129

**ಮನೆ ಬಾಡಿಗೆಗೆ**
RTO ಆಫೀಸ್ ಹತ್ತಿರ, ಲತಾ ಬೇಕರಿ ಹಿಂಭಾಗ, ಕೊಂಡಜ್ಜಿ ರಸ್ತೆ, ವಿಜಯನಗರ ಬಡಾವಣೆಯಲ್ಲಿ ಹೊಸ 2 ಮನೆಗಳು, 1 BHK - 2 ಬಾತ್‌ರೂಂ (ಫ್ಯಾಮಿಲಿಗಾಗಿ), 1 ರೂಂ ಹಾಗೂ ಕಿಚನ್, ಸೆಮಿಫರ್ನಿಶ್ಡ್, ಸ್ಟುಡೆಂಟ್ಸ್, ಬ್ಯಾಚಲರ್‌ಗಳಿಗೆ ಸೂಕ್ತ.
94492 22283

**GOWDOWN FOR RENT**
Contact :
87227 17316,
87227 17317

**ಸೈಟ್ ಮಾರಾಟಕ್ಕಿದೆ**
ಡಿಸಿ ಆಫೀಸ್, ರಿಂಗ್ ರೋಡಿಗೆ ಹೊಂದಿರುವ ಶ್ರೀಮತಿ ರತ್ನಮ್ಮ ತೆಲಗಿ ಲೇಔಟ್‌ನಲ್ಲಿ 30x40 ಪಶ್ಚಿಮಾಭಿಮುಖ, ಸೈಟ್ ಮಾರಾಟಕ್ಕಿದೆ.
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
63620 33944

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**TYPIST WANTED**
Harsha Engineers
Davanagere.
94480 56468

**ಹೆಸರು ತಿದ್ದುಪಡಿಗಾಗಿ**
ಮಂಜುಳ ಎಂ. ಆದ ನಾನು ನನ್ನ ಮಗುವಿನ ಜನನ ಪತ್ರದಲ್ಲಿ ನನ್ನ ಮಗನ ಹೆಸರು ಲಿಖಿತ್ ಕುಮಾರ್ ಡಿ.ಬಿ. ಎಂದು ದಾಖಲಾಗಿದ್ದು, ಇನ್ನು ಮುಂದೆ ನನ್ನ ಮಗನ ಹೆಸರನ್ನು ವಿಜೇತ್‌ಕುಮಾರ್ ಡಿ.ಬಿ. ಎಂದು ಮುಂದುವರೆಸಿಕೊಂಡು ಹೋಗುತ್ತೇನೆ. ಸಹಿ /- ವಿಜೇತ್‌ಕುಮಾರ್ ಡಿ.ಬಿ.

**ಹೆಸರು ತಿದ್ದುಪಡಿಗಾಗಿ**
ಎಂ.ವಿ. ಬಕ್ಕೇಶ್ ಬಿನ್ ಈರಭದ್ರಪ್ಪ ಆದ ನಾನು ನನ್ನ ಮಗುವಿನ ಜನನ ಪತ್ರದಲ್ಲಿ ಮಗುವಿನ ಹೆಸರು ರೇವತಿ ಎಂ.ಬಿ. ಎಂದು ದಾಖಲಾಗಿದ್ದು, ಇನ್ನು ಮುಂದೆ ಮಗುವಿನ ಹೆಸರನ್ನು ರಕ್ಷಿತ ಎಂ.ಬಿ. ಎಂದು ಮುಂದುವರೆಸಿಕೊಂಡು ಹೋಗುತ್ತೇನೆ. ಸಹಿ /- ರಕ್ಷಿತ ಎಂ.ಬಿ.

**ಹೆಸರು ತಿದ್ದುಪಡಿಗಾಗಿ**
ಮಾನಸ ಟಿ, ಆದ ನಾನು ನನ್ನ ಮಗುವಿನ ಜನನ ಪತ್ರದಲ್ಲಿ ಮಗುವಿನ ಹೆಸರು ತ್ರಿಶಿಕ್ ಬಿ ಪ್ರಸಾದ್ ಎಂದು ದಾಖಲಗಾಗಿದ್ದು, ಇನ್ನು ಮುಂದೆ ಮಗುವಿನ ಹೆಸರನ್ನು ತ್ರಿಶಿಕ್ ಟಿ ಎಂದು ಮುಂದುವರೆಸಿಕೊಂಡು ಹೋಗುತ್ತೇನೆ. ಸಹಿ /- ತ್ರಿಶಿಕ್ ಟಿ

**ಹೆಸರು ತಿದ್ದುಪಡಿಗಾಗಿ**
ಪರ್ಹಾನ ಆದ ನಾನು ನನ್ನ ಮಗುವಿನ ಜನನ ಪತ್ರದಲ್ಲಿ ತಾಯಿಯ ಹೆಸರು ಪರ್ಹಾನ ಬಾನು ಎಂದು ದಾಖಲಾಗಿದ್ದು, ಇನ್ನು ಮುಂದೆ ತಾಯಿಯ ಹೆಸರನ್ನು ಪರ್ಹಾನ ಎಂದು ಮುಂದುವರೆಸಿಕೊಂಡು ಹೋಗುತ್ತೇನೆ. ಸಹಿ /- ಪರ್ಹಾನ

**ಹೆಸರು ತಿದ್ದುಪಡಿಗಾಗಿ**
ಮಹಮ್ಮದ್ ಅಜಹರುದ್ದೀನ್ ಮುಳ್ಳೂರ ಆದ ನಾನು ನನ್ನ ಮಗುವಿನ ಜನನ ಪತ್ರದಲ್ಲಿ ಮಗುವಿನ ಹೆಸರು ತಸೀಫಾ ಮುಳ್ಳೂರ ಎಂದು ದಾಖಲಾಗಿದ್ದು, ಇನ್ನು ಮುಂದೆ ಮಗುವಿನ ಹೆಸರನ್ನು ಸುಮೆಹಾ ಮುಳ್ಳೂರ ಎಂದು ಮುಂದುವರೆಸಿಕೊಂಡು ಹೋಗುತ್ತೇನೆ. ಸಹಿ /- ಸುಮೆಹಾ ಮುಳ್ಳೂರ

**ಲೈಂಗಿಕ ನಿಶ್ಶಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**Sri Nidhi Educational Trust (R)**
ನೇರ ಪರೀಕ್ಷೆಗಳು
SSLC, PUC, B.A, B.Com, BCA, M.A, M.Com, M.Sc, Diploma Course, B.E, B.Tech, B,Lisb, M.Lisb, MBA, MCA & All Courses
WANTED
Receptionist (Ladies)
77601 01939, 77601 63629

**REQUIRED**
Lady candidate for Office work, with computer knowledge
PJ Extn., Davangere.
99006 66122

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**TUITION FOR**
7th, 8th, 9th, 10th, ICSE - CBSE State ಮಕ್ಕಳಿಗೆ ಟ್ಯೂಷನ್ ಮಾಡಲಾಗುವುದು.
Contact : Vidya Vikas Tuition Centre, Behind Aaraike Hospital, Davanagere.
Mob : 83109 32579

**HOSPITAL STAFF REQUIREMENTS**
* Receptionist - 3 (2 years experience)
* Nurses-10 (1 to 3 years expe)
* Aaya - 5 (2 years expe)
Suchetana Hospital Davanagere
Attractive salary will be given
9449990000, 08192 230203

**TEACHERS WANTED**
Maths - 2 Posts, Science - 2 Posts, English - 2 Posts, Computer - 2 Posts, NTC - 4 Posts. Contact : Shree Ramakrishna International School, DCM Township Dvg.
Mob : 80950 08434

**ಮಾರಾಟಕ್ಕೆ ಇದೆ**
ಹೋಟೆಲ್‌ನ ದೋಸೆ ಸ್ಟವ್, ಹಂಚು, ಸ್ಟೀಲ್ ಸ್ಟ್ಯಾಂಡ್ ಸಮೇತ ಹಾಗು ದೊಡ್ಡ ಗ್ರೈಂಡರ್ ಮಾರಾಟಕ್ಕೆ ಇದೆ. ಆಸಕ್ತಿ ಇರುವವರು ಮಾತ್ರ ಕರೆ ಮಾಡಿ.
ಮೊಬೈಲ್ :
94823 72955

# ಹಾಡು ಹಗಲೇ ವಿದ್ಯಾರ್ಥಿನಿಯ ಬರ್ಬರ ಹತ್ಯೆ: ಆವರಗೊಳ್ಳ ಓಂಕಾರ ಶ್ರೀ ಖಂಡನೆ

ದಾವಣಗೆರೆ, ಏ.19- ಹುಬ್ಬಳ್ಳಿಯ ನಗರ ಪಾಲಿಕೆ ಸದಸ್ಯ ನಿರಂಜನ್ ಹಿರೇಮಠ ಅವರ ಪುತ್ರಿ 24 ವರ್ಷದ ನೇಹಾ ಹಿರೇಮಠ ಅವರನ್ನು ಕಾಲೇಜಿನ ಆವರಣದಲ್ಲಿ ಹಾಡು ಹಗಲೇ ಬರ್ಬರವಾಗಿ ಹತ್ಯೆ ಮಾಡಿರುವುದು ಅತ್ಯಂತ ಖಂಡನೀಯ ಮತ್ತು ಕ್ರೌರ್ಯವಾ ಗಿದ್ದು, ಇದು ಮಾನವೀಯತೆಯ ಕಗ್ಗೊಲೆ ಯಾಗಿದೆ ಎಂದು ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಹೇಳಿದ್ದಾರೆ.

ಈ ಕೃತ್ಯವನ್ನು ನೋಡಿ ಸಾರ್ವತ್ರಿಕವಾಗಿ ಮಕ್ಕಳನ್ನು ಯಾವ ಧೈರ್ಯದಿಂದ ಓದಲಿಕ್ಕೆ ಶಾಲಾ-ಕಾಲೇಜಿಗೆ ಹೊರಗಡೆ ಕಳಿಸಬೇಕೆಂದು ಪೋಷಕರು ದಿಗ್ಭ್ರಾಂತರಾಗಿದ್ದಾರೆ. ಅಷ್ಟೇ ಅಲ್ಲದೇ ಹೆತ್ತ ತಂದೆ-ತಾಯಂದಿರ ಎದೆಗೆ ಸಿಡಿಲು ಬಡಿದಂತಾಗಿದೆ ನೇಹಾಳ ಹತ್ಯೆ. ನೇಹಾಳ ಹತ್ಯೆ ಅಷ್ಟೇ ಅಲ್ಲದೇ ದೇಶದೆಲ್ಲೆಡೆ ಅಮಾಯಕರ ಕಗ್ಗೊಲೆಗಳು ದುರುಳರಿಂದ ಎಗ್ಗಿಲ್ಲದೇ ನಿರಂತರ ನಡೆಯುತ್ತಲೇ ಇವೆ ಎಂದು ತಿಳಿಸಿದ್ದಾರೆ.

ಕಾನೂನು ಸುವ್ಯವಸ್ಥೆಯನ್ನು ಧಿಕ್ಕರಿಸಿ, ಈ ದುಷ್ಟರು ಮಾಡಿದ ದುಷ್ಕೃತ್ಯಗಳಿಗೆ ಯಾವುದೇ ರಾಜಕೀಯ, ಜಾತಿ, ಧರ್ಮದ, ಲೇಪನ ಮಾಡದೇ ಮಾನವೀಯತೆಯಿಂದ ಖಂಡಿಸುವ ಮೂಲಕ ಈ ಕೃತ್ಯ ಎಸಗಿದ ಪಾಪಿಗಳಿಗೆ ಕಠಿಣ ಶಿಕ್ಷೆ ವಿಧಿಸಿ, ಸಮಾಜದಲ್ಲಿ ಮುಂದೆ ಇಂತಹ ಹೇಯ ಕೃತ್ಯಗಳು ನಡೆಯದಂತೆ ಸರ್ಕಾರ ದಿಟ್ಟ ಕ್ರಮದಿಂದ ಎಚ್ಚರ ವಹಿಸಬೇಕಾಗಿದೆ ಎಂದು ಹೇಳಿದ್ದಾರೆ.

# ಮತ್ತೊಮ್ಮೆ ನಾಮಪತ್ರ ಸಲ್ಲಿಸಿದ ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್




ದಾವಣಗೆರೆ,ಏ.19- ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್ ಇಂದು ಮತ್ತೊಮ್ಮೆ ನಾಮಪತ್ರ ಸಲ್ಲಿಸಿದರು. ಮೊನ್ನೆ ದಿನಾಂಕ 17ರಂದು ರೋಡ್ ಶೋ ನಡೆಸಿ, ಅದ್ದೂರಿ ಮೆರವಣಿಗೆ ಮೂಲಕ ತೆರಳಿ ನಾಮಪತ್ರ ಸಲ್ಲಿಸಿದ್ದ ಅವರು ಇಂದು ಮೂರನೇ ಬಾರಿ ನಾಮಪತ್ರ ಸಲ್ಲಿಕೆ ಮಾಡಿದರು.

ಈ ವೇಳೆ ಮಾತನಾಡಿದ ಅವರು, ಜಿಲ್ಲೆಯಾದ್ಯಂತ ಪಾದಯಾತ್ರೆ ನಡೆಸಿದ್ದೇನೆ. ಗ್ರಾಮೀಣ ಭಾಗದ ಜನರ ಸಮಸ್ಯೆಗಳು, ಸಂಕಷ್ಟಗಳನ್ನು ಅರಿತಿದ್ದೇನೆ. ಕುಟುಂಬ ರಾಜಕಾರಣದ ವಿರುದ್ಧದ ಸಿಟ್ಟು ಹಳ್ಳಿ ಮಾತ್ರವಲ್ಲ, ನಗರದಲ್ಲಿಯೂ ಇದೆ. ಜನರು ಬಹಿರಂಗವಾಗಿ ಹೇಳದಿದ್ದರೂ ಎರಡೂ ಪಕ್ಷಗಳ ನಾಯಕರು, ಕಾರ್ಯಕರ್ತರಲ್ಲಿಯೂ ಅಸಮಾಧಾನ ಇದೆ. ಜನರು ಸ್ವಾಭಿಮಾನಿಯ ಸ್ವಾಭಿಮಾನದ ಸ್ಪರ್ಧೆ ಕುರಿತಂತೆ ಎಲ್ಲೆಡೆ ಮಾತನಾಡುತ್ತಿದ್ದಾರೆ. ಪ್ರೀತಿ, ವಿಶ್ವಾಸ ತೋರುತ್ತಿದ್ದಾರೆ. ಹಾಗಾಗಿ, ಈ ಬಾರಿ ಗೆಲುವು ಖಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾಂಗ್ರೆಸ್ ಪಕ್ಷದ ಟಿಕೆಟ್ ತಪ್ಪಿದ ಮೇಲೆಯೂ ಜನರ ಬಳಿ ಹೋಗಿದ್ದೆ. ಆಗ ಜನರು ಸ್ಪರ್ಧೆ ಮಾಡಲೇಬೇಕೆಂದು ಶೇಕಡಾ 99ರಷ್ಟು ಜನರು ಸಲಹೆ ನೀಡಿದರು. ಈ ಕಾರಣಕ್ಕಾಗಿ ಸ್ವಾಭಿಮಾನಿಯಾಗಿ ಸ್ಪರ್ಧೆ ಮಾಡಿದ್ದು, ಕುಟುಂಬ ರಾಜಕಾರಣಕ್ಕೆ ತಕ್ಕ ಪಾಠವನ್ನು ಪ್ರಜ್ಞಾವಂತ ಮತದಾರರು ಕಲಿಸಲಿದ್ದಾರೆ ಎಂದು ಭವಿಷ್ಯ ನುಡಿದರು.

# ಹರಿಹರ ತಾ. ಹಲವು ಗ್ರಾಮಗಳಲ್ಲಿ ಮಳೆ, ಗಾಳಿ



ಹರಿಹರ, ಏ, 19 - ನಗರ ಸೇರಿದಂತೆ ತಾಲ್ಲೂಕಿನ ಗುತ್ತೂರು, ಕೊಂಡಜ್ಜಿ, ಗಂಗನಹರಸಿ, ಸಾರಥಿ, ಹಳೆ ಹರ್ಲಾಪುರ, ಪಾಮೇನಹಳ್ಳಿ, ಕುರುಬರಹಳ್ಳಿ, ಕರಲಹಳ್ಳಿ, ಚಿಕ್ಕಬಿದರಿ, ಬಸಾಪುರ, ಅಮರಾವತಿ, ದೊಗ್ಗಳ್ಳಿ ಹಲಸಬಾಳು, ರಾಜನಹಳ್ಳಿ, ಬಿಳಸನೂರು, ನಂದಿಗಾವಿ, ಹನಗವಾಡಿ, ಬೆಳ್ಳೂಡಿ, ರಾಮತೀರ್ಥ, ನಾಗೇನಹಳ್ಳಿ ಸೇರಿದಂತೆ ಹಲವಾರು ಗ್ರಾಮಗಳಲ್ಲಿ ಮುಂಗಾರು ಮಳೆ ಗಾಳಿ ರಭಸವು ಹೆಚ್ಚಿನ ಪ್ರಮಾಣದಲ್ಲಿ ಆಗಿದ್ದರಿಂದ, ಕೊಂಡಜ್ಜಿ, ಗಂಗನಹರಸಿ, ಬಸಾಪುರ ಅಮರಾವತಿ ಸೇರಿದಂತೆ ಹಲವು ಗ್ರಾಮಗಳಲ್ಲಿ ವಿದ್ಯುತ್ ಕಂಬಗಳು ಮತ್ತು ಅನೇಕ ಮರಗಳು ನೆಲಕ್ಕೆ ಉರುಳಿ ಬಿದ್ದಿದ್ದು , ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗಿತ್ತು.

ತಡ ರಾತ್ರಿಯ ಸಮಯದಲ್ಲಿ ಬೆಸ್ಕಾಂ ಸಿಬ್ಬಂದಿಗಳು ಸ್ಥಳಕ್ಕೆ ಭೇಟಿಕೊಟ್ಟು ವಿದ್ಯುತ್ ಕಂಬವನ್ನು ಸರಿ ಪಡಿಸಿದರು. ಆದರೆ ರಾತ್ರಿ ವೇಳೆ ಆಗಿದ್ದರಿಂದ ಕೊಂಡಜ್ಜಿ ಹಾಗೂ ಕೆಲವು ಹಳ್ಳಿಗಳಲ್ಲಿ ಮಾತ್ರ ವಿದ್ಯುತ್ ಕಂಬವನ್ನು ದುರಸ್ತಿ ಪಡಿಸಿದರು.

ನಗರದಲ್ಲಿ ಕೆಲವೊಂದು ಬಡಾವಣೆಯಲ್ಲಿ ಮಳೆಯ ಪ್ರಮಾಣವು ಹೆಚ್ಚಾಗಿದ್ದರಿಂದ ವಿದ್ಯುತ್ ಪೂರೈಕೆ ಕಡಿತ ಮಾಡಿ ಮಳೆಯ ಪ್ರಮಾಣ ಕಡಿಮೆ ಆದ ನಂತರ ವಿದ್ಯುತ್ ಸಂಪರ್ಕವನ್ನು ಎಂದಿನಂತೆ ಇರುವಂತೆ ಬೆಸ್ಕಾಂ ಸಿಬ್ಬಂದಿಗಳು ಕಾರ್ಯವನ್ನು ಮಾಡುವಲ್ಲಿ ನಿರತರಾದರು.

## ಫಿಲಿಪೈನ್ಸ್‌ಗೆ ಬ್ರಹ್ಮೋಸ್ ಕ್ಷಿಪಣಿ ಪೂರೈಕೆ

ನವದೆಹಲಿ, ಏ. 19 – ಫಿಲಿಪೈನ್ಸ್‌ಗೆ ಮೊದಲ ಕಂತಿನ ಬ್ರಹ್ಮೋಸ್ ಕ್ಷಿಪಣಿಗಳನ್ನು ಪೂರೈಸಲಾಗಿದೆ. ಇದರಿಂದಾಗಿ ಉಭಯ ದೇಶಗಳ ನಡುವಿನ ಸೈನಿಕ ಸಂಬಂಧ ಮತ್ತಷ್ಟು ಬಲವಾಗಿದೆ.

ಬ್ರಹ್ಮೋಸ್ ಕ್ಷಿಪಣಿಗಳನ್ನು ಪೂರೈಸುವ ಸಲುವಾಗಿ ಭಾರತ ಎರಡು ವರ್ಷಗಳ ಹಿಂದೆ 375 ದಶಲಕ್ಷ ಡಾಲರ್‌ಗಳ ಒಪ್ಪಂದ ಮಾಡಿಕೊಂಡಿತ್ತು. ಭಾರತೀಯ ವಾಯುಪಡೆಯ ಸಿ-17 ಗ್ಲೋಬ್‌ಮಾಸ್ಟರ್ ಸಾರಿಗೆ ವಿಮಾನದ ಮೂಲಕ ಕ್ಷಿಪಣಿ ಹಾಗೂ ಲಾಂಚರ್‌ಗಳನ್ನು ಫಿಲಿಪೈನ್ಸ್‌ನ ನೌಕಾ ಪಡೆಗಳಿಗೆ ತಲುಪಿಸಲಾಗಿದೆ. ಭಾರತ ಬ್ರಹ್ಮೋಸ್ ಕ್ಷಿಪಣಿಗಳನ್ನು ರಫ್ತು ಮಾಡಿರುವುದು ಇದೇ ಮೊದಲು.

ಅರ್ಜೆಂಟಿನಾ ಸೇರಿದಂತೆ ಹಲವು ದೇಶಗಳು ಭಾರತದಿಂದ ಬ್ರಹ್ಮೋಸ್ ಕ್ಷಿಪಣಿ ಖರೀದಿಸಲು ಆಸಕ್ತಿ ತೋರಿಸಿವೆ. ಭಾರತ – ರಷ್ಯಾ ಜಂಟಿ ಉದ್ಯಮವಾದ ಬ್ರಹ್ಮೋಸ್ ಏರೋಸ್ಪೇಸ್ ಕಂಪನಿ ಮೂಲಕ ಈ ಕ್ಷಿಪಣಿಗಳನ್ನು ಉತ್ಪಾದಿಸಲಾಗುತ್ತಿದೆ. ಇವುಗಳನ್ನು ಸಬ್‌ಮರೀನ್, ಹಡಗು, ವಿಮಾನ ಹಾಗೂ ಭೂಮಿಯ ಮೇಲಿಂದ ಸಿಡಿಸಬಹುದು.

## ಜಿಎಂವಿವಿಯಲ್ಲಿ ಇಂದು 'ಓಪನ್ ಡೇ'

ದಾವಣಗೆರೆ, ಏ.19- ನಗರದ ಜಿ.ಎಂ. ವಿಶ್ವವಿದ್ಯಾಲಯದಲ್ಲಿ ನಾಳೆ ದಿನಾಂಕ 20ರ ಶನಿವಾರ 'ಓಪನ್ ಡೇ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ವೃತ್ತಿ ಸಲಹೆ ಮತ್ತು ಉದ್ಯೋಗ ವಿಭಾಗದ ನಿರ್ದೇಶಕರಾದ ತೇಜಸ್ವಿ ಕಟ್ಟಿಮನಿ ಟಿ.ಆರ್. ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಜಿಎಂವಿವಿ ಮಾನವ ಸಂಪನ್ಮೂಲ ನಿರ್ದೇಶಕ ಡಾ.ವೀರಗಂಗಾಧರ ಸ್ವಾಮಿ ಮಾತನಾಡಿ, ಇದೇ ವೇಳೆ ಜಿ.ಎಂ. ವಿವಿಯ ಎಲ್ಲಾ ವಿಭಾಗದ ವಿದ್ಯಾರ್ಥಿಗಳು ಮಾಡಿರುವ ಪ್ರಾಜೆಕ್ಟ್ ಎಕ್ಸಿಬಿಷನ್ ಸಹ ಇರಲಿದೆ. ಸಂಜೆ ಸಂಗೀತಕಾರ ಚಂದನ್ ಶೆಟ್ಟಿ ಅವರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದರು.

# ಮೋದಿ ಆಡಳಿತಕ್ಕೆ ಮತ್ತೆ ಅವಕಾಶ ಕೊಟ್ಟರೆ ಸರ್ವಾಧಿಕಾರ ಪ್ರಜಾಪ್ರಭುತ್ವಕ್ಕೆ ಮಾರಕ



**ದಾವಣಗೆರೆಯಲ್ಲಿ ಕಾಂಗ್ರೆಸ್ ಪಕ್ಷದ ಗೆಲುವು ಪಕ್ಕಾ : ರಾಜ್ಯಸಭಾ ಮಾಜಿ ಸದಸ್ಯ ಎಲ್. ಹನುಮಂತಯ್ಯ ವಿಶ್ವಾಸ**

ದಾವಣಗೆರೆ, ಏ. 19 - ಯಾವುದೇ ಬಂಡಾಯವಿದ್ದರೂ ದಾವಣಗೆರೆಯಲ್ಲಿ ಈ ಬಾರಿ ಕಾಂಗ್ರೆಸ್ ಪಕ್ಷದ ಗೆಲುವು ತಡೆಯಲಾಗದು ಎಂದು ರಾಜ್ಯಸಭಾ ಮಾಜಿ ಸದಸ್ಯ ಎಲ್. ಹನುಮಂತಯ್ಯ ತಿಳಿಸಿದರು.

ನಗರದ ಬಾಪೂಜಿ ಅತಿಥಿ ಗೃಹದಲ್ಲಿ ತಮ್ಮನ್ನು ಭೇಟಿ ಮಾಡಿದ ಮಾಧ್ಯಮದವರೊಂದಿಗೆ ಅವರು ಮಾತನಾಡಿದರು.

ದೇಶದ ಇತಿಹಾಸದಲ್ಲಿ ಲೋಕಸಭಾ ಚುನಾವಣೆಗಳಲ್ಲಿ ಬಂಡಾಯವೆದ್ದು ಸ್ಪರ್ಧೆ ಮಾಡಿ ಗೆದ್ದವರು ಇಲ್ಲ, ಮಂಡ್ಯದಲ್ಲಿ ಕಾಂಗ್ರೆಸ್ ಪಕ್ಷದ ಬೆಂಬಲದಿಂದ ಸುಮಲತಾ ಗೆದ್ದರು ಎಂದ ಅವರು, ದಾವಣಗೆರೆಯಲ್ಲಿ ಪಕ್ಷೇತರ ಅಭ್ಯರ್ಥಿ ವಿನಯ್ ಕುಮಾರ್ ಗೆಲುವು ಸುಲಭವಲ್ಲ ಎಂದರು.

ಕೇಂದ್ರ ಸರ್ಕಾರವು ಜನರಿಗೆ ಘೋಷಣೆ ಮಾಡಿದಂತಹ ಘೋಷಣೆಗಳನ್ನು ಜಾರಿಗೆ ತಂದಿಲ್ಲ. 140 ರಷ್ಟು ಇದ್ದ ಜನಸಂಖ್ಯೆ ಹೆಚ್ಚಾಗಿದೆ. ನರೇಂದ್ರ ಮೋದಿಯವರು ವಿಕಸಿತ ಭಾರತ ಮಾಡಲು ಹೊರಟಿದ್ದಾರೆ. ವಿಕಸಿತ ಭಾರತದಲ್ಲಿ ಸತ್ವ ಇಲ್ಲ ಎಂದ ಅವರು ಮಧ್ಯಮ, ಕೆಳ ಹಾಗೂ ಮೇಲ್ವರ್ಗ ವರ್ಗದವರು ಬಿಜೆಪಿ ಪರವಿಲ್ಲ, ವಿರೋಧವಾಗಿದ್ದಾರೆ ಎಂದರು.

ಕಳೆದ ಹತ್ತು ವರ್ಷಗಳ ಕೇಂದ್ರ ಸರ್ಕಾರದಿಂದ ಅಹಿಂದ ವರ್ಗಕ್ಕೆ ಒಂದು ಹೊಸ ಯೋಜನೆ ರೂಪವಾಗಿಲ್ಲ, ಶೋಷಿತ ಸಮುದಾಯಗಳ ವಿರೋಧ ಬಿಜೆಪಿಗೆ ಇದೆ. ಶೇ 72 ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಈ ಎಲ್ಲಾ ಸಮಸ್ಯೆಯಿಂದ ಬಲಿಷ್ಠ ಭಾರತ ಎಂದು, ಹೇಗೆ ನಿರ್ಮಿಸಲು ಸಾಧ್ಯ ಎಂದು ಪ್ರಶ್ನಿಸಿದರು. ನರೇಂದ್ರ ಮೋದಿ ಅವರು ನಮ್ಮದು ಭ್ರಷ್ಟಾಚಾರ ಮುಕ್ತ ಸರ್ಕಾರ ಎಂದಿದ್ದಾರೆ. ಎಲೆಕ್ಟೋರಲ್ ಬಾಂಡ್ ನಲ್ಲಿ 6300 ಕೋಟಿ ಸಂಗ್ರಹ ಕಾನೂನು ಬಾಹಿರವಾಗಿದೆ. ಬಿಜೆಪಿಯಿಂದ ಹಫ್ತಾ ವಸೂಲಿಯಾಗುತ್ತಿದೆ ಎಂದು ದೂರಿದರು.

ಕರ್ನಾಟಕದಲ್ಲಿ ಬಿಜೆಪಿಗೆ ಬಹುಮತವಿಲ್ಲ. ನಾಲ್ಕು ಸಾರಿಯೂ ವಾಮ ಮಾರ್ಗದ ಮೂಲಕ ಸರ್ಕಾರ ರಚನೆ ಮಾಡಲಾಗಿದೆ, ಪಾರ್ಲಿಮೆಂಟ್ ನಲ್ಲಿಯೂ ಸಹ ಇದೇ ತರ ಆಗಿದೆ. ದಬ್ಬಾಳಿಕೆ ಮಾಡಿ ತಮ್ಮ ಪಕ್ಷಕ್ಕೆ ಸಂಸದರನ್ನು ಸೆಳೆಯುತ್ತಿದ್ದಾರೆ. ಇದು ಪ್ರಜಾ ಪ್ರಭುತ್ವಕ್ಕೂ ಮಾರಕ ಎಂದರು.

ಮೋದಿ ಅಧಿಕಾರಕ್ಕೆ ಬರುವ ಮುನ್ನ ನೀಡಿದ ಭರವಸೆ ಹುಸಿಯಾಗಿದೆ. ಕಳೆದ ಹತ್ತು ವರ್ಷಗಳಲ್ಲಿ ಸ್ವಿಸ್ ಬ್ಯಾಂಕಿಗೆ ಡೆಪಾಜಿಟ್ ಮಾಡಿರುವವರ ಸಂಖ್ಯೆ ಹೆಚ್ಚಾಗಿದೆ. 14 ಸಾವಿರ ಕೋಟಿ ಇದ್ದ ಡೆಪಾಸಿಟ್ 34 ಸಾವಿರ ಕೋಟಿಯಾಗಿದೆ. ಬ್ಲಾಕ್ ಮಾರ್ಕೆಟ್‌ನವರನ್ನು ಹಿಡಿಯಲಾಗುತ್ತಿಲ್ಲ. 38 ಜನ ಎಕಾನಿಮಿಕ್ ಅಡೆಂಟರ್ಸ್‌ಗಳು ಹತ್ತು ವರ್ಷದಲ್ಲಿ ಪರಾರಿಯಾಗಿದ್ದಾರೆ. ಸುಮಾರು 10 ಲಕ್ಷ ಕೋಟಿ ಸಾಲ ವಸೂಲಿ ಮಾಡುತ್ತೇವೆ ಎಂದವರು ಕೇವಲ 13% ಸಾಲ ವಸೂಲಿಮಾಡಿ ಉಳಿದ ಹಣ ಶ್ರೀಮಂತರಿಗೆ ಮನ್ನಾ ಮಾಡಲಾಗಿದೆ ಎಂದರು. ನರೇಂದ್ರ ಮೋದಿ ಅವರಿಗೆ ಮತ್ತೆ ಐದು ವರ್ಷ ಆಡಳಿತಕ್ಕೆ ಅವಕಾಶ ಕೊಟ್ಟರೆ ಸರ್ವಾಧಿಕಾರ ಪ್ರಜಾ ಪ್ರಭುತ್ವಕ್ಕೆ ಮಾರಕವಾಗಲಿದೆ ಎಂದರು.

ಬಿಜೆಪಿಯವರ ಮೂಲ ಉದ್ದೇಶವೇ ಸಂವಿಧಾನ ಬದಲಾವಣೆ ಮಾಡುವುದು ಎಂದ ಅವರು ಉತ್ತರ ಪ್ರದೇಶದಲ್ಲಿ ಕ್ಯಾಂಡಿಡೇಟ್ ಒಬ್ಬರು ಸಂವಿಧಾನ ಬದಲಾವಣೆ ಮಾಡಬೇಕು ಎಂದು ಭಾಷಣದಲ್ಲಿ ಹೇಳಿದ್ದಾರೆ ಅವರ ಮೇಲೆ ಕ್ರಮ ಆಗಬೇಕು ಎಂದರು. ನಾವು ಸಹ ಒಳಮೀಸಲಾತಿ ಜಾರಿಗೆ ಮನವಿ ಮಾಡಿದ್ದೇವೆ ಈ ಬಗ್ಗೆ ವಾದ-ವಿವಾದ ಆಗುತ್ತಿದೆ ಎಂದರು.

ನಮ್ಮ ಪ್ರಣಾಳಿಕೆಯಲ್ಲಿ ಮಹಿಳೆಯರಿಗೆ ಒಂದು ಲಕ್ಷ ಕೊಡ್ತೀವ ಎಂದಿದ್ದೇವೆ, ರೈತರಿಗಾಗಿ ಸ್ವಾಮಿನಾಥನ್ ವರದಿ ಜಾರಿ ಮಾಡಿ ಮಿನಿಮಮ್ ಸಪೋರ್ಟ್ ಪ್ರೈಸ್ ರೈತರಿಗೆ ಕೊಡ್ತೀವಿ, ಪದವೀಧರರಿಗೆ 1 ಲಕ್ಷ ನಿರುದ್ಯೋಗ ಭತ್ಯೆ ಕೊಡ್ತೀವಿ, ಸಾಮಾಜಿಕ ಆರ್ಥಿಕ, ಶೈಕ್ಷಣಿಕ ಬೆಳವಣಿಗೆಗಾಗಿ ಜಾತಿ ಸಮೀಕ್ಷೆ ಮಾಡ್ತೀವಿ ಎಂದ ಅವರು ಮೋದಿಯವರದು ಭಾವನಾತ್ಮಕ ಪ್ರಣಾಳಿಕೆಯಾದರೆ, ನಮ್ಮದು ನಿರ್ದಿಷ್ಟ ಭಾವ ಪ್ರಣಾಳಿಕೆ ಎಂದರು. ಜನತೆ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿ ದೇಶದ ಬೆಳವಣಿಗೆ ಕಾಣಬೇಕು ಎಂದು ತಿಳಿಸಿದರು.

ಈ ವೇಳೆ ಕಾಂಗ್ರೆಸ್ ಮುಖಂಡರಾದ ಬಿ. ಹೆಚ್. ವೀರಭದ್ರಪ್ಪ, ಬಿ.ಎಂ. ಹನುಮಂತಪ್ಪ, ಎಲ್.ಎಂ ಹನುಮಂತಪ್ಪ, ಎಲ್.ಡಿ. ಗೋಣೆಪ್ಪ, ಸೋಮಲಾಪುರದ ಹನುಮಂತಪ್ಪ, ಎನ್. ನೀಲಗಿರಿಯಪ್ಪ, ಸಾಗರ್, ಹರೀಶ್, ಹೆಚ್. ಹರೀಶ್, ವಕೀಲ ಪ್ರಕಾಶ್ ಪಾಟೀಲ್, ನಾಗರಾಜ್ ಬಿ.ಜಿ. ಚಂದ್ರಶೇಖರ, ಎಂ.ಟಿ. ಸುಭಾಶ್, ರಮೇಶ್, ಕೃಷ್ಣನಾಯ್ಕ್, ಶ್ಯಾಂ, ಅಂಜಿನಪ್ಪ, ರಾಕಿ, ಮಂಜಪ್ಪ ಹಲಗೇರಿ, ಈಶಣ್ಣ ಮತ್ತಿತರರು ಉಪಸ್ಥಿತರಿದ್ದರು.

## ಅಖಿಲ ಭಾರತ ವಿಶ್ವಕರ್ಮ ಪರಿಷತ್‌ನಿಂದ ಕಾಂಗ್ರೆಸ್‌ಗೆ ಬೆಂಬಲ

ದಾವಣಗೆರೆ, ಏ.19- ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಅಖಿಲ ಭಾರತ ವಿಶ್ವಕರ್ಮ ಪರಿಷತ್ ಬೆಂಬಲ ನೀಡಲಿದೆ ಎಂದು ರಾಷ್ಟ್ರೀಯ ಅಧ್ಯಕ್ಷ ಎಚ್.ವಿ.ಸತೀಶ್ ಕುಮಾರ್ ತಿಳಿಸಿದ್ದಾರೆ. ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದಿಂದ ಮಾತ್ರ ವಿಶ್ವಕರ್ಮ ಸಮಾಜ ಅಭಿವೃದ್ಧಿ ಹೊಂದಲು ಸಾಧ್ಯ ಎಂದರು.

ವಿಶ್ವಕರ್ಮ ಸಮಾಜದವರಾಗಿದ್ದ ಪಂಜಾಬ್‌ನ ದಿ.ಗ್ಯಾನಿ ಜೈಲ್ ಸಿಂಗ್‌ರವರನ್ನು ವಿಶ್ವಕರ್ಮ ಸಮಾಜದವರು ಎಂದು ಗುರುತಿಸಿ ರಾಷ್ಟ್ರಪತಿಗಳನ್ನಾಗಿ ಮಾಡಿದ್ದನ್ನು ವಿಶ್ವಕರ್ಮ ಸಮಾಜ ಯಾವತ್ತೂ ಮರೆಯುವುದಿಲ್ಲ.

ರಾಜ್ಯದಲ್ಲಿ ವಿಶ್ವಕರ್ಮ ಜಯಂತಿ, ಜಕಣಾಚಾರಿ ಸ್ಮರಣೋತ್ಸವ ಹಾಗು ವಿಶ್ವಕರ್ಮ ಅಭಿವೃದ್ಧಿ ನಿಗಮ, ಸಿದ್ದರಾಮ ಯ್ಯನವರ ಸರ್ಕಾರ ಮಾಡಿರುವುದನ್ನು ನಾವು ಮರೆಯುವ ಹಾಗಿಲ್ಲ. ಈ ರೀತಿಯಾಗಿ ನಮ್ಮ ಸಮಾಜದ ಸಾಕಷ್ಟು ಅಭಿವೃದ್ಧಿಯನ್ನು ಕಾಂಗ್ರೆಸ್ ಮಾಡಿರುತ್ತದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಪರಿಷತ್ ರಾಷ್ಟ್ರೀಯ ಉಪಾಧ್ಯಕ್ಷ ಕೆ.ಕಾಳಾಚಾರಿ, ಎಚ್.ಎನ್.ಜಯಾಚಾರ್ ಹಿರೇಮೆಗಳಗೇರಿ, ಕೆ.ಸೋಮಶೇಖರಚಾರ್ ನಿಟ್ಟುವಳ್ಳಿ ಇದ್ದರು.

## ನಗರದಲ್ಲಿ ಸಿ.ಇ.ಟಿ. ಪರೀಕ್ಷೆ ಸುಸೂತ್ರ

**ಭೌತಶಾಸ್ತ್ರ 218, ರಸಾಯನಶಾಸ್ತ್ರ ಪರೀಕ್ಷೆಗೆ 223 ಗೈರು**

ದಾವಣಗೆರೆ,ಏ.19 - ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ವೃತ್ತಿಪರ ಕೋರ್ಸ್‌ಗಳಾದ ಇಂಜಿನಿಯರಿಂಗ್, ಕೃಷಿ ವಿಜ್ಞಾನ, ಪಶು ಸಂಗೋಪನೆ, ಫಾರ್ಮಸಿ, ಬಿಎಸ್ಸಿ ನರ್ಸಿಂಗ್ ಸೇರಿದಂತೆ, ಇನ್ನಿತರೆ ಕೋರ್ಸ್‌ಗಳಿಗೆ 2024 ನೇ ಸಾಲಿಗೆ ಪ್ರವೇಶ ಪಡೆಯಲು ಇಂದು ಸಿಇಟಿ ಪರೀಕ್ಷೆ ಸುಸೂತ್ರವಾಗಿ ನಡೆದಿದೆ.

ಬೆಳಗಿನ ಅವಧಿಯಲ್ಲಿ ನಡೆದ ಭೌತಶಾಸ್ತ್ರ ವಿಷಯದ ಪರೀಕ್ಷೆಗೆ 218 ಹಾಗೂ ಮಧ್ಯಾಹ್ನ ನಡೆದ ರಸಾಯನ ಶಾಸ್ತ್ರ ಪರೀಕ್ಷೆಗೆ 223 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು ಎಂದು ಶಾಲಾ ಶಿಕ್ಷಣ, ಪದವಿ ಪೂರ್ವ ಇಲಾಖೆ ಉಪನಿರ್ದೇಶಕ ಕರಿಸಿದ್ದಪ್ಪ ತಿಳಿಸಿದ್ದಾರೆ.

ನಗರದ 23 ಕೇಂದ್ರಗಳಲ್ಲಿ ಸಿಇಟಿ ಪರೀಕ್ಷೆ ನಡೆದಿದ್ದು ಭೌತಶಾಸ್ತ್ರ ವಿಷಯವನ್ನು 12296 ವಿದ್ಯಾರ್ಥಿಗಳು ತೆಗೆದುಕೊಂಡಿದ್ದು ಇದರಲ್ಲಿ 12078 ವಿದ್ಯಾರ್ಥಿಗಳು ಹಾಜರಾಗಿ 218 ವಿದ್ಯಾರ್ಥಿಗಳು ಗೈರು ಹಾಜರಾಗಿರುವರು. ರಸಾಯನಶಾಸ್ತ್ರ ವಿಷಯದ ಪರೀಕ್ಷೆಯನ್ನು 12296 ವಿದ್ಯಾರ್ಥಿಗಳು ತೆಗೆದುಕೊಂಡಿದ್ದು 12073 ವಿದ್ಯಾರ್ಥಿಗಳು ಹಾಜರಾಗಿ 223 ವಿದ್ಯಾರ್ಥಿಗಳು ಗೈರು ಹಾಜರಾಗಿರುತ್ತಾರೆ.

## ನಗರದಲ್ಲಿ ಇಂದು ವಿದ್ಯುತ್ ಇಲ್ಲ

ವಿನೋಬನಗರ 2ನೇ ಮೇನ್, ಹಳೆ ರೆಡ್ಡಿ ಬಿಲ್ಡಿಂಗ್, ಚರ್ಚ್ ರಸ್ತೆ, ರೆಸಿಡೆನ್ಸಿ, ಜಯದೇವ ಶಾಲೆ, ಮಸೀದಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಬೆಸ್ಕಾಂ ಕೋರಿದೆ.

## ಸೌಭಾಗ್ಯ ಬೀಳಗಿಮಠಗೆ ರ್‍ಯಾಂಕ್ ಡಾ. ಪ್ರಭಾ ಮಲ್ಲಿಕಾರ್ಜುನ್ ಸನ್ಮಾನ



ದಾವಣಗೆರೆ, ಏ. 19 - ಯುಪಿಎಸ್ಸಿ ಪರೀಕ್ಷೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ 101ನೇ ರ್‍ಯಾಂಕ್ ಪಡೆದು, ಕರ್ನಾಟಕಕ್ಕೆ 2ನೇ ರ್‍ಯಾಂಕ್ ಪಡೆದಿರುವ ನಗರದ ಸೌಭಾಗ್ಯ ಬೀಳಗಿಮಠ ಅವರ ನಿವಾಸಕ್ಕೆ ಎಸ್.ಎಸ್. ಕೇರ್ ಟ್ರಸ್ಟ್ ಟ್ರಸ್ಟಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ತೆರಳಿ ಅಭಿನಂದಿಸಿದರು. ಇದೇ ಸಂದರ್ಭದಲ್ಲಿ ಸೌಭಾಗ್ಯ ತಂದೆ ಶರಣಯ್ಯ ಸ್ವಾಮಿ ಮತ್ತು ತಾಯಿ ಶರಣಮ್ಮ ದಂಪತಿಯನ್ನು ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಸನ್ಮಾನಿಸಿ, ಗೌರವಿಸಿದರು.

## ಯುಪಿಎಸ್ಸಿ ರ್‍ಯಾಂಕ್ ವಿದ್ಯಾರ್ಥಿಗೆ ಸಿದ್ದೇಶ್ವರ ಅಭಿನಂದನೆ



ದಾವಣಗೆರೆ, ಏ.18- ಯುಪಿಎಸ್ಸಿ ಪರೀಕ್ಷೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ 101ನೇ ರ್‍ಯಾಂಕ್ ಪಡೆದು, ಕರ್ನಾಟಕ್ಕೆ 2ನೇ ರ್‍ಯಾಂಕ್ ಪಡೆದಿರುವ ನಗರದ ಸೌಭಾಗ್ಯ ಬೀಳಗಿಮಠ ಅವರನ್ನು ಸಂಸದ ಜಿ. ಎಂ.ಸಿದ್ದೇಶ್ವರ ಅವರು ಸನ್ಮಾನಿಸಿ, ಗೌರವಿಸಿದರು.

ಸೌಭಾಗ್ಯ ಅವರ ನಿವಾಸಕ್ಕೆ ನಿನ್ನೆ ಭೇಟಿ ನೀಡಿ ಅವರನ್ನು ಸನ್ಮಾನಿಸಿದ ಸಂಸದರು, ನಿಮ್ಮ ಸಾಧನೆ ಹಲವು ವಿದ್ಯಾರ್ಥಿಗಳಿಗೆ ಮಾರ್ಗದರ್ಶನವಾಗಲಿ ಎಂದು ಶುಭ ಹಾರೈಸಿದರು.

ಈ ವೇಳೆ ಸೌಭಾಗ್ಯ ತಂದೆ ಶರಣಯ್ಯ, ತಾಯಿ ಶರಣಮ್ಮ, ಬಿಜೆಪಿ ಮುಖಂಡರಾದ ಎನ್.ಎ. ಮುರುಗೇಶ್, ಬಾಡದ ಆನಂದರಾಜ್, ಎಸ್ಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ, ಮತ್ತಿತರರು ಜೊತೆಯಲ್ಲಿದ್ದರು.

## ನೇಹಾ ಹತ್ಯೆ : ನಸೀರ್ ಅಹ್ಮದ್ ಖಂಡನೆ

ದಾವಣಗೆರೆ, ಏ.19- ಹುಬ್ಬಳ್ಳಿ - ಧಾರವಾಡ ಮಹಾನಗರ ಪಾಲಿಕೆ ಸದಸ್ಯ ನಿರಂಜನಯ್ಯ ಹಿರೇಮಠ ಅವರ ಪುತ್ರಿ ಕು. ನೇಹಾ ಹಿರೇಮಠ ಅವರ ಹತ್ಯೆ ಪ್ರಕರಣವನ್ನು ಬಿಜೆಪಿ ಮುಖಂಡ ನಸೀರ್ ಅಹ್ಮದ್ ಖಂಡಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯನ್ನು ಪೊಲೀಸರು ಈಗಾಗಲೇ ಬಂಧಿಸಿದ್ದು, ಆತನ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಅವರು ಸರ್ಕಾರವನ್ನು ಆಗ್ರಹಿಸಿದ್ದಾರೆ.

## ಮೊದಲ ಬಾರಿಗೆ ಶೊಂಪೆನ್ ಬುಡಕಟ್ಟು ಜನರಿಂದ ಮತದಾನ

ಪೋರ್ಟ್ ಬ್ಲೇರ್, ಏ. 19 – ಇದೇ ಮೊದಲ ಬಾರಿಗೆ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಶೊಂಪೆನ್ ಬುಡಕಟ್ಟು ಸಮುದಾಯದ ಏಳು ಜನರು ಮತದಾನ ಮಾಡಿದ್ದಾರೆ. ಈ ಬುಡಕಟ್ಟು ಜನರು ಗ್ರೇಟ್ ನಿಕೋಬಾರ್ ದ್ವೀಪಗಳಲ್ಲಿದ್ದು, ಸೂಕ್ಷ್ಮ ಸಮುದಾಯಕ್ಕೆ ಸೇರಿದವರಾಗಿದ್ದಾರೆ.

ಅರಣ್ಯ ಸಿಬ್ಬಂದಿಯು ಇವರ ಮತದಾನಕ್ಕಾಗಿ 'ಶೊಂಪೆನ್ ಗುಡಿಸಲು' ಎಂಬ ಹೆಸರಿನ ಮತಗಟ್ಟೆ ಸ್ಥಾಪಿಸಿತ್ತು. ಮತದಾನದ ನಂತರ ಬುಡಕಟ್ಟು ಜನರು ಸೆಲ್ಫಿ ತೆಗೆಸಿಕೊಂಡರು.

ಈ ಬಗ್ಗೆ ಹೇಳಿಕೆ ನೀಡಿರುವ ಮುಖ್ಯ ಚುನಾವಣಾ ಅಧಿಕಾರಿ ಬಿ.ಎಸ್. ಜಗ್ಲನ್, ಇದೇ ಮೊದಲ ಬಾರಿಗೆ ಶೊಂಪೆನ್ ಬುಡಕಟ್ಟಿನ ಏಳು ಜನರು ಮತ ಚಲಾಯಿಸಿದ್ದಾರೆ. ಅವರಿಗೆ ಮತಯಂತ್ರ ಹಾಗೂ ವಿವಿಪ್ಯಾಟ್ ಬಳಸುವ ಬಗ್ಗೆ ತರಬೇತಿ ನೀಡಿದ್ದೆವು. ಅವರು ಕಾಡುಗಳಿಂದ ಹೊರ ಬಂದು ಮತ ಚಲಾಯಿಸಿದ್ದಾರೆ ಎಂದಿದ್ದಾರೆ. ಅಂಡಮಾನ್ ನಿಕೋಬಾರ್ ದ್ವೀಪ ಒಂದು ಸಂಸದೀಯ ಕ್ಷೇತ್ರ ಹೊಂದಿದೆ.

2011ರ ಜನಗಣತಿಯ ಪ್ರಕಾರ ಶೊಂಪೆನ್ ಬುಡಕಟ್ಟು ಜನರ ಸಂಖ್ಯೆ 229 ಆಗಿದೆ.

ಒಂಗೆ ಹಾಗೂ ಗ್ರೇಟ್ ಅಂಡಮಾನೀಸ್ ಬುಡಕಟ್ಟು ಸಮುದಾಯದವರು 2019ರಿಂದ ಮತ ಚಲಾಯಿಸುತ್ತಿದ್ದಾರೆ. ಶೊಂಪೆನ್ ಮತದಾರರು ಇದೇ ಮೊದಲ ಬಾರಿಗೆ ಮತದಾನ ಮಾಡಿದ್ದಾರೆ.

## ಜ್ಯೂ. ಮೋದಿ ಶೋಷಿತರ ನಾಯಕನ ಮನೆಗೆ ಬಿಜೆಪಿ ಪ್ರಚಾರ

ದಾವಣಗೆರೆ, ಏ. 19 - ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರ ನಾಮಪತ್ರ ಸಲ್ಲಿಸುವ ಬೃಹತ್ ಮೆರವಣಿಗೆಯಲ್ಲಿ ಭಾಗವಹಿಸಲು ನಗರಕ್ಕೆ ಆಗಮಿಸಿದ್ದ ಉಡುಪಿ ಜಿಲ್ಲೆಯ ಹಿರಿಯಡ್ಕ ಗ್ರಾಮದ ಸದಾಶಿವನಾಯ್ಕ ಅವರು ಜ್ಯೂನಿಯರ್ ಮೋದಿ ಎಂದೇ ಹೆಸರಾಗಿದ್ದು, ಶೋಷಿತರ ವರ್ಗಗಳ ನಾಯಕ ಬಾಡದ ಆನಂದರಾಜ್ ನಿವಾಸಕ್ಕೆ ಇಂದು ದಿಢೀರ್ ಭೇಟಿ ನೀಡಿದ್ದರು. ಜ್ಯೂ. ಮೋದಿ ಅವರನ್ನು ನೋಡಿದ ತರಳಬಾಳು ಬಡಾವಣೆಯ ನಿವಾಸಿಗಳು ಆಶ್ಚರ್ಯ ವ್ಯಕ್ತಪಡಿಸಿದರು. ಅವರನ್ನು ಆನಂದ ರಾಜ್ ಕುಟುಂಬ ಪರಿವಾರ ಸ್ವಾಗತಿಸಿ, ಬೀಳ್ಕೊಟ್ಟರು.

ಬಿಜೆಪಿಯನ್ನು ಮಗದೊಮ್ಮೆ ಅಧಿಕಾರಕ್ಕೆ ತಂದು ದೇಶ ರಕ್ಷಣೆ ಮಾಡಲು ನರೇಂದ್ರ ಮೋದಿಯವರನ್ನು 3 ನೇ ಬಾರಿ ಪ್ರಧಾನಿ ಹುದ್ದೆಗೆ ತರಲು ದಾವಣಗೆರೆ ಜಿಲ್ಲೆಯಾದ್ಯಂತ ಪ್ರಚಾರ ಮಾಡುವುದಾಗಿ ಅವರು ಹೇಳಿದರು.



**Davanagere Coffee Roasters & Tea Traders Association**
# 671/2A, Mandipet, Davanagere-577001.

ಪ್ರಕಟಣೆ

ಈ ಮೂಲಕ ಎಲ್ಲಾ ಗ್ರಾಹಕರಿಗೆ ತಿಳಿಸುವುದೇನೆಂದರೆ,
ಇಂದಿನಿಂದ
ಕಾಫಿ ಪುಡಿ ದರವನ್ನು ಪ್ರತಿ ಕೆ.ಜಿ. 1ಕ್ಕೆ
ರೂ. 100/- ರಂತೆ
ಹೆಚ್ಚಳ ಮಾಡಿರುತ್ತೇವೆ.

ದಯವಿಟ್ಟು ಎಲ್ಲಾ ಗ್ರಾಹಕರು ಸಹಕರಿಸಬೇಕಾಗಿ ವಿನಂತಿ.

– ಅಧ್ಯಕ್ಷರು

॥ ಶ್ರೀ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಪ್ರಸನ್ನ ॥


**ಜಿ.ಐ ಅಕ್ಕಿ ದೊರೆಯುತ್ತದೆ**



ಹಿಮಾಲಯದ ಪರ್ವತ ಶ್ರೇಣಿಯ ನದಿಗಳ ನೀರಿನಿಂದ ಬೆಳೆದ, ಒಳ್ಳೆಯ ಗುಣಮಟ್ಟವಾದ ಕಡಿಮೆ ಪ್ರಮಾಣದ ಜಿ.ಐ. ಅಕ್ಕಿ, ಸಕ್ಕರೆ ಕಾಯಿಲೆ ನಿಯಂತ್ರಿಸುವ ಮತ್ತು ಎಲ್ಲಾ ಕಾಯಿಲೆಗಳನ್ನು ನಿಯಂತ್ರಣದಲ್ಲಿ ಇಡಲು ಸಹಕರಿಸುತ್ತದೆ ಹಾಗೂ ರಕ್ತದಲ್ಲಿ ಗ್ಲುಕೋಸ್ ಅನ್ನು ಕಡಿಮೆ ಮಾಡುವುದಕ್ಕೆ ತುಂಬಾ ಪರಿಣಾಮಕಾರಿಯಾಗಿದೆ ಮತ್ತು ಪೌಷ್ಟಿಕವಾದ ಅಕ್ಕಿ ದೊರೆಯುತ್ತದೆ.

ಅಕ್ಕಿ ದೊರೆಯುವ ಸ್ಥಳ : **ದಾವಣಗೆರೆ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಸೌಹಾರ್ದ ಸಹಕಾರಿ ಸಂಘ ನಿಯಮಿತ ಕೆಇಬಿ ಕಚೇರಿ ಎದುರು, ಹದಡಿ ರಸ್ತೆ, ದಾವಣಗೆರೆ. ಮೊ : 89049 39084**

**ಶ್ರೀ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ದೇವಸ್ಥಾನದಲ್ಲಿ ದೊರೆಯುತ್ತದೆ. ಜೆಹೆಚ್ ಪಟೇಲ್ ನಗರ, ದಾವಣಗೆರೆ. ಮೊ : 99805 48918**



**100ನೇ ವರ್ಷದ ಶ್ರೀ ರಾಮೋತ್ಸವ**

**ಶ್ರೀ ಸೀತಾ ಸಮೇತ ಶ್ರೀ ರಾಮಚಂದ್ರ ಸ್ವಾಮಿಯ ವಿವಾಹ ಮಹೋತ್ಸವ**


**ಶ್ರೀ ಕೋದಂಡರಾಮದೇವರ ದೇವಸ್ಥಾನದ ಸ್ಥಾಪನಾ ಶತಮಾನೋತ್ಸವದ ಅಂಗವಾಗಿ**

ದಿನಾಂಕ 20-04-2024ರ ಶನಿವಾರದಂದು ಶ್ರೀ ಸೀತಾ ಸಮೇತ ಶ್ರೀ ರಾಮಚಂದ್ರ ಸ್ವಾಮಿಗೆ ಗಂಗಾನಯನ, ಗುರುದೇವತಾ ವಂದನ, ಕಂಕಣ, ಬಂಧನ, ಮಹಾಸಂಕಲ್ಪ, ಗಣಪತಿ ಪೂಜಾ, ಪುಣ್ಯಾಹ ವಾಚನ ಸಹಿತ ಮಹಾಭಿಷೇಕ ಪೂಜಾದಿಗಳು ಹಾಗೂ ವರ ಪೂಜೆಯ ಕಾರ್ಯಕ್ರಮ ಹಾಗೂ **ಸಂಜೆ 6.00 ರಿಂದ 9.00 ರ ವರೆಗೆ 'ವೇಣು ನಾದಾಲಯ ಸಮರ್ಪಣ'**ಇವರಿಂದ **ಶಾಸ್ತ್ರೀಯ ಸಂಗೀತ** ಕಾರ್ಯಕ್ರಮ ಏರ್ಪಡಿಸಲಾಗಿದೆ.

ದಿನಾಂಕ 21-04-2024ನೇ ಭಾನುವಾರದಂದು ಬೆಳಿಗ್ಗೆ ಶ್ರೀ ಸೀತಾ ಸಮೇತ ಶ್ರೀ ರಾಮಚಂದ್ರ ಸ್ವಾಮಿಗೆ ಮಹಾಭಿಷೇಕ ಪೂಜಾದಿಗಳು ಹಾಗೂ ಶ್ರೀ ಸೀತಾಮಾತೆಗೆ ಗೌರಿ ಪೂಜೆ. ಕುಂಕುಮಾರ್ಚನೆ, ಸುಮಂಗಲೀಯರಿಗೆ ಬಾಗಿಣ ಶಾಸ್ತ್ರ ಹಾಗೂ ಶ್ರೀ ರಾಮಚಂದ್ರ ದೇವರಿಗೆ ಕಾಶೀ ಯಾತ್ರಾದಿ ಪೂರ್ವಕ ಮಧುಪರ್ಕ ಮತ್ತು ಮಧ್ಯಾಹ್ನ 11:36 ರಿಂದ 12:26 ರವರೆಗೆ ಸಲ್ಲುವ ಶುಭ ಅಭಿಜಿನ್ ಮುಹೂರ್ತದಲ್ಲಿ ಕಲ್ಯಾಣೋತ್ಸವ ನಂತರ ಕನ್ಯಾದಾನ ಮಾಂಗಲ್ಯಧಾರಣಾದಿ ಹಾಗೂ ಮಹಾಪೂಜಾದಿ ಕಾರ್ಯಕ್ರಮಗಳು ನೆರವೇರುವವು, ಭಕ್ತಾದಿಗಳಾದ ತಾವುಗಳೆಲ್ಲರೂ ಈ ಜಗತ್ ಕಲ್ಯಾಣ ಕಾರ್ಯಕ್ಕೆ ಆಗಮಿಸಿ ಭಗವಂತನ ಕೃಪೆಗೆ ಪಾತ್ರರಾಗಬೇಕಾಗಿ ಕೋರುತ್ತೇವೆ.

**ಶ್ರೀ ಕೋದಂಡರಾಮ ದೇವರು ಟೆಂಪಲ್ ಅಸೋಸಿಯೇಷನ್**
ರಾಜನಹಳ್ಳಿ ಹನುಮಂತಪ್ಪ ಕಟ್ಟಡದ ಆವರಣ, ಪಿ.ಬಿ.ರಸ್ತೆ, ದಾವಣಗೆರೆ - 577002.

## ಬಿಸಿಲಿನ ತಾಪಕ್ಕೆ ಮಳೆಯ ಸಿಂಚನ ನೊಣವಿನಕೆರೆ ಶ್ರೀ ಸಂಕಲ್ಪದ ಪವಾಡ



ದಾವಣಗೆರೆ, ಏ. 19- ಮಳೆಯಿಲ್ಲದೆ ಬಿಸಿಲಿನ ತಾಪಕ್ಕೆ ಬೆಂದು ಹೋಗಿರುವ ನಗರದ ಜನತೆಗೆ ವರುಣ ಮೊನ್ನೆ ಮಳೆಯ ಸಿಂಚನದ ಸ್ಪರ್ಷ ಮಾಡಿದ್ದು, ಇದು ಅಜ್ಜಯ್ಯ ಮಾಡಿದ ಸಂಕಲ್ಪದ ಪವಾಡ ಎಂದು ಭಕ್ತರು ಬಣ್ಣಿಸಿದ್ದಾರೆ.

ಈ ಸಂದರ್ಭದಲ್ಲಿ ಶ್ರೀಗಳವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದ ಅನೇಕ ಭಕ್ತರು, ಬಿಸಿಲಿನ ತಾಪಮಾನ ಮತ್ತು ಮಳೆ ಬಗ್ಗೆ ಶ್ರೀಗಳವರೊಂದಿಗೆ ಪ್ರಸ್ತಾಪಿಸಿ, ಮಳೆಗಾಗಿ ಸಂಕಲ್ಪ ಮಾಡುವಂತೆ ಬೇಡಿಕೆಯನ್ನಿಟ್ಟರು.

ಅಜ್ಜಯ್ಯ ಎಂದೇ ರಾಜ್ಯದಲ್ಲಿ ಪ್ರಸಿದ್ಧರಾಗಿರುವ ತುಮಕೂರು ಜಿಲ್ಲೆ, ತಿಪಟೂರು ತಾಲ್ಲೂಕು ನೊಣವಿನಕೆರೆಯ ಶ್ರೀ ಕಾಡಸಿದ್ದೇಶ್ವರ ಮಠದ ಶ್ರೀ ಡಾ. ಕರಿವೃಷಭ ದೇಶೀ ಕೇಂದ್ರ ಶಿವಯೋಗೀಶ್ವರ ಮಹಾಸ್ವಾಮೀಜಿ ಮಾಡಿದ ಸಂಕಲ್ಪದಿಂದ ನಗರಕ್ಕೆ ಮಳೆ ಹನಿಯ ಸ್ಪರ್ಶವಾಗಿದೆ ಎಂದು ಭಕ್ತರು ಹೇಳಿದ್ದಾರೆ.

ಧಾರವಾಡ ಜಿಲ್ಲೆಯ ಅಮ್ಮಿನಬಾವಿ ಪಂಚಗ್ರಹ ಹಿರೇಮಠದ ಪ್ರಥಮ ಜಾತ್ರಾ ಮಹೋತ್ಸವದ ರಥೋತ್ಸವದಲ್ಲಿ ಪಾಲ್ಗೊಂಡು ವಾಪಾಸ್ ನೊಣವಿನಕೆರೆಗೆ ಹೋಗುವ ಮಾರ್ಗ ಮಧ್ಯೆ ಸ್ಥಳೀಯ ಕಾಯಿಪೇಟೆಯಲ್ಲಿರುವ ಲಿ. ವೇ. ಹೆಚ್.ಎಂ. ಸೋಮನಾಥಯ್ಯ ಅವರ ಹಿರೇಮಠದಲ್ಲಿ ಸ್ವಲ್ಪ ಹೊತ್ತು ಶ್ರೀಗಳು ವಿಶ್ರಾಂತಿ ಪಡೆದರು.

ಮಳೆಗಾಗಿ ವಿಶೇಷ ಪೂಜೆ - ಸಂಕಲ್ಪ ಮಾಡಿದ ಶ್ರೀಗಳು, ನಗರದಿಂದ ತಮ್ಮ ಪ್ರಯಾಣ ಆರಂಭಿಸಿದ ಕೆಲ ನಿಮಿಷಗಳಲ್ಲೇ ಕನಿಷ್ಟ 10 ನಿಮಿಷ ಮಳೆಯಾಗಿದ್ದು, ಇದು ನೊಣವಿನ ಕೆರೆ ಶ್ರೀಗಳ ಪವಾಡ ಎಂದು ಭಕ್ತರು ತಮ್ಮ ಭಕ್ತಿಯ ಪರಾಕಾಷ್ಟೆ ಮೆರೆದರು.

ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ನಿರ್ದೇಶಕರೂ ಆಗಿರುವ ದೇವನಗರಿ ಗ್ಯಾಸ್ ಏಜೆನ್ಸಿ ಮಾಲೀಕ ಹೆಚ್.ಎಂ. ರುದ್ರಮುನಿಸ್ವಾಮಿ ಮತ್ತು ಶ್ರೀಮತಿ ಹೆಚ್.ಎಂ. ಹೇಮಲತಾ ದಂಪತಿ, ಹೆಚ್.ಎಂ. ಪ್ರೀತಿ, ಹೆಚ್.ಎಂ ಪ್ರೀತಮ್ ಹಾಗೂ ಶ್ರೀ ಹಿರೇಮಠದ ಭಕ್ತವೃಂದದವರು ಶ್ರೀಗಳವರನ್ನು ಬರಮಾಡಿಕೊಂಡು ಬೀಳ್ಕೊಟ್ಟರು.

## ಬಿಜೆಪಿ, ಅದರ ಮಿತ್ರ ಪಕ್ಷಗಳನ್ನು ಸೋಲಿಸಲು ಸಿಐಟಿಯು ಕರೆ

ದಾವಣಗೆರೆ, ಏ.19- ಬಿಜೆಪಿ ಹಾಗೂ ಅದರ ಮಿತ್ರ ಪಕ್ಷಗಳನ್ನು ಸೋಲಿಸುವಂತೆ ಕಾರ್ಮಿಕ ವರ್ಗಕ್ಕೆ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ಕರೆ ನೀಡಿದೆ.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಿಐಟಿಯು ರಾಜ್ಯ ಕಾರ್ಯದರ್ಶಿ ಮಹಾಂತೇಶ್ ಕೆ., ನಮ್ಮ ಸಂಘಟನೆ ಹಿಂದಿನಿಂದಲೂ ಕಾರ್ಮಿಕ, ಶ್ರಮಿಕ ಹಾಗೂ ಸಾಮಾನ್ಯ ಜನ ವಿರೋಧಿ ನೀತಿಗಳ ವಿರುದ್ಧ ಪಕ್ಷಬೇಧ ಮರೆತು ಹೋರಾಟ ನಡೆಸುತ್ತಿದೆ ಎಂದರು.

ಪ್ರಸ್ತುತ ದಿನಗಳಲ್ಲಿ ವ್ಯಕ್ತಿಗಳನ್ನು ವೈಭವೀಕರಿಸಿ, ಜನ ಸಾಮಾನ್ಯರ ಸಮಸ್ಯೆಗಳನ್ನು ನಗಣ್ಯ ಮಾಡುವ ವ್ಯವಸ್ಥೆ ನಡೆಯುತ್ತಿದೆ. ಇದರ ಬದಲು ಜನರ ಸಮಸ್ಯೆಗಳು ಚರ್ಚೆಗೆ ಬರಬೇಕು ಎಂದರು.

ದೇಶದಲ್ಲಿ ಶೇ.97ರಷ್ಟಿರುವ ಅಸಂಘಟಿತ ಕಾರ್ಮಿಕರಿಗೆ ಮೂಲ ಸೌಲಭ್ಯಗಳು ದೊರೆತಿಲ್ಲ. ಹೊಸ ಉದ್ಯೋಗಗಳು ಸೃಷ್ಟಿಯಾಗಿಲ್ಲ. ಬಡವ-ಶ್ರೀಮಂತರ ನಡುವಿನ ಅಂತರ ಹೆಚ್ಚಾಗಿದೆ. ಮೋದಿ ಸರ್ಕಾರದ ನೀತಿಗಳು ಕಾರ್ಪೊರೇಟ್ ಸಂಸ್ಥೆಗಳಿಗೆ ಹೆಚ್ಚು ಅನುಕೂಲವಾಗಿವೆ ಎಂದರು.

CITU

> ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ಸಿಪಿಐ (ಎಂ) ಅಭ್ಯರ್ಥಿ ಬೆಂಬಲಿಸಲು ಹಾಗೂ ಉಳಿದ 27 ಕ್ಷೇತ್ರಗಳಲ್ಲಿ ಇಂಡಿಯಾ ಒಕ್ಕೂಟದ ಭಾಗವಾಗಿರುವ ಕಾಂಗ್ರೆಸ್ ಅಭ್ಯರ್ಥಿ ಬೆಂಬಲಿಸಲು ಸಿಐಟಿಯು ತೀರ್ಮಾನಿಸಿದೆ.
> - ಕೆ. ಮಹಾಂತೇಶ್, ರಾಜ್ಯ ಕಾರ್ಯದರ್ಶಿ, ಸಿಐಟಿಯು

ಈ ಬಾರಿಯ ಲೋಕಸಭಾ ಚುನಾವಣೆ ಕಾರ್ಮಿಕ ವರ್ಗದ ಪಾಲಿಕೆಗೆ ಮಾಡು ಇಲ್ಲವೇ ಮಡಿ ಯುದ್ಧದಂತಿದೆ. ಈ ಕಾರಣದಿಂದಾಗಿ ಶ್ರಮಿಕ, ಕಾರ್ಮಿಕ ವರ್ಗದ ವಿರುದ್ಧವಾಗಿ ಕೆಲಸ ಮಾಡುತ್ತಿರುವ ಬಿಜೆಪಿ ವಿರುದ್ಧ ಮತ ಚಲಾಯಿಸುವಂತೆ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಸಿಐಟಿಯು ಜಿಲ್ಲಾ ಸಂಚಾಲಕ ಆನಂದರಾಜು ಕೆ.ಹೆಚ್, ಎಲ್ಐಸಿ ಪ್ರತಿನಿಧಿಗಳ ಸಂಘದ ಜಿಲ್ಲಾಧ್ಯಕ್ಷ ಎಸ್.ಜಿ. ಪಂಪಣ್ಣ, ಫೆಡರೇಷನ್ ಆಫ್ ಆಟೋರಿಕ್ಷಾ ಚಾಲಕರ ಸಂಘದ ಜಿಲ್ಲಾ ಸಂಚಾಲಕ ಶ್ರೀನಿವಾಸ ಮೂರ್ತಿ ಕೆ., ಕರ್ನಾಟಕ ರಾಜ್ಯ ಔಷಧ ಮತ್ತು ಮಾರಾಟ ಪ್ರತಿನಿಧಿಗಳ ಸಂಘದ ವೆಂಕಟೇಶ್ ಎ. ಉಪಸ್ಥಿತರಿದ್ದರು.

## 28ರಂದು ಚಿಗಟೇರಿ ಶಿವನಾರದಮುನಿ ತೇರು



ಚಿಗಟೇರಿ, ಏ. 19 - ಹರಪನಹಳ್ಳಿ ತಾಲ್ಲೂಕಿನ ಚಿಗಟೇರಿ ಗ್ರಾಮದ ಶ್ರೀ ಶಿವನಾರದಮುನಿ ರಥೋತ್ಸವವು ಇದೇ ದಿನಾಂಕ 28ರಂದು ನಡೆಯಲಿದ್ದು, ಈ ಹಿನ್ನೆಲೆಯಲ್ಲಿ ಜಾತ್ರೆಯನ್ನು ವಿಜೃಂಭಣೆಯಿದ ನಡೆಸುವ ಸಂಬಂಧ ಪೂರ್ವಭಾವಿ ಸಭೆಯನ್ನು ಚಿಗಟೇರಿ ದೇವಸ್ಥಾನದ ಆವರಣದಲ್ಲಿ ಇಂದು ನಡೆಸಲಾಯಿತು.

ದಿನಾಂಕ 28ರ ಭಾನುವಾರ ಸಂಜೆ 5 ರಿಂದ 6 ರವರೆಗೆ ಸಲ್ಲುವ ಮೂಲಾ ನಕ್ಷತ್ರದಲ್ಲಿ ರಥೋತ್ಸವವನ್ನು ಅದ್ದೂರಿಯಾಗಿ ಜರುಗಿಸಲಾಗುವುದು ಎಂದು ಸಭೆಯ ಅಧ್ಯಕ್ಷತೆ ವಹಿಸಿದ್ದ ಹೋಟೆಲ್ ಉದ್ಯಮಿಯೂ ಆಗಿರುವ ಶ್ರೀ ನಾರದಮುನಿ ಸ್ವಾಮಿ ಸೇವಾ ಟ್ರಸ್ಟ್‌ನ ಅಧ್ಯಕ್ಷ ಶ್ರೀ ಅಣಬೇರು ರಾಜಣ್ಣ ತಿಳಿಸಿದರು. ದಿನಾಂಕ 29ರ ಸೋಮವಾರ ಸಂಜೆ 5.30ಕ್ಕೆ ಓಕಳಿ ಕಾರ್ಯಕ್ರಮ ಜರುಗಲಿದೆ ಎಂದು ಹೇಳಿದರು.

> ಜಾತ್ರೆಯನ್ನು ವಿಜೃಂಭಣೆಯಿಂದ ನಡೆಸಲು ನಿರ್ಧಾರ.
> - ಅಣಬೇರು ರಾಜಣ್ಣ ಅಧ್ಯಕ್ಷರು, ಶ್ರೀ ನಾರದಮುನಿ ಸ್ವಾಮಿ ಸೇವಾ ಟ್ರಸ್ಟ್

ಧಾರ್ಮಿಕ ದತ್ತಿ ಇಲಾಖೆಯ ಸಹಾಯಕ ಆಯುಕ್ತ ಜಿ.ವಿ.ಆರ್.ಪ್ರಸಾದ್, ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ತಾಲ್ಲೂಕು ಆರೋಗ್ಯಾಧಿಕಾರಿಗಳು, ದೇವಸ್ಥಾನ ಸಮಿತಿ ಸದಸ್ಯ ವಡ್ಡಿನಹಳ್ಳಿ ಷಡಕಣ್ಣ, ಶಾಮನೂರು ಬಸಣ್ಣ, ಕಲಪನಹಳ್ಳಿ ಬಸವಲಿಂಗಪ್ಪ, ಹೊಳಲ್ಕೆರೆ ವೇದಮೂರ್ತಿ, ಹುಣಸಿಹಳ್ಳಿ ಜಾತಪ್ಪ, ಇಂಜಿನಿಯರ್ ಸುರೇಶ್, ಪಲ್ಲಾಗಟ್ಟೆ ನಾಗರಾಜ್, ಅಸಗೋಡು ಅಶೋಕ್, ವಡ್ಡಿನಹಳ್ಳಿ ಮರುಳಸಿದ್ದಪ್ಪ ಮತ್ತು ಸ್ಥಳೀಯ ಮುಖಂಡರಾದ ದ್ಯಾಮನಗೌಡ್ರು, ರಾಜಣ್ಣ, ಹಾಲಪ್ಪ, ಬಸವನಗೌಡ್ರು, ಜಯ್ಯನಗೌಡ್ರು ಮತ್ತು ದೇವಸ್ಥಾನದ ಅರ್ಚಕರು ಸೇರಿದಂತೆ ಅನೇಕ ಜನ ಭಕ್ತಾಧಿಗಳು, ಗ್ರಾಮಸ್ಥರು ಸಭೆಯಲ್ಲಿ ಭಾಗವಹಿಸಿದ್ದರು.

ಸದರಿ ದೇವಸ್ಥಾನದ ಎಲ್ಲಾ ಭಕ್ತಾದಿಗಳು ರಥೋತ್ಸವ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿ ರಥೋತ್ಸವವನ್ನು ಅದ್ದೂರಿಯಾಗಿ ಯಶಸ್ವಿಗೊಳಿಸಬೇಕೆಂದು ಟ್ರಸ್ಟ್‌ನ ಅಧ್ಯಕ್ಷ ಅಣಬೇರು ರಾಜಣ್ಣ ತಿಳಿಸಿದ್ದಾರೆ.

## ಹರಪನಹಳ್ಳಿ ಕ್ಷೇತ್ರದಲ್ಲಿ ಇಂದು ಪ್ರಭಾ ಮಲ್ಲಿಕಾರ್ಜುನ್ ಪ್ರಚಾರ



ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಹರಪನಹಳ್ಳಿ ವಿಧಾನಸಭಾ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಇಂದು ಪ್ರಚಾರ ಕೈಗೊಳ್ಳುವರು.

ಕ್ಷೇತ್ರ ವ್ಯಾಪ್ತಿಯ ಹಿರೇಮೇಗಳಗೆರೆ ಗ್ರಾಮದಿಂದ ಬೆಳಿಗ್ಗೆ 9-30 ಗಂಟೆಯಿಂದ ಪ್ರಚಾರ ಆರಂಭಿಸುವ ಪ್ರಭಾ ಮಲ್ಲಿಕಾರ್ಜುನ್ ಅವರು ಲಕ್ಷ್ಮೀಪುರ, ಶಿಂಗ್ರಿಹಳ್ಳಿ, ರಾಗಿ ಮಸಲವಾಡ, ಕಂಚಿಕೆರೆ, ಅಡವಿಹಳ್ಳಿ, ಕೂಲಹಳ್ಳಿ, ಬಾಗಳಿ, ಮಾಡ್ಲಗೆರೆ, ಹಾರಕನಾಳು, ತೊಗರಿಕಟ್ಟೆ ಗ್ರಾಮಗಳಲ್ಲಿ ಮಧ್ಯಾಹ್ನ 3 ರವರೆಗೆ ಮತ ಯಾಚನೆ ಮಾಡುವರು. ಶಾಸಕರಾದ ಶ್ರೀಮತಿ ಲತಾ ಮಲ್ಲಿಕಾರ್ಜುನ್ ಅವರು ಪ್ರಚಾರ ಕಾರ್ಯದಲ್ಲಿ ಭಾಗವಹಿಸುವರು ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ.ವಿ.ಅಂಜಿನಪ್ಪ ಮತ್ತು ಕುಬೇರಪ್ಪ ತಿಳಿಸಿದ್ದಾರೆ.

## ಬಿಸಿಲು : ವಕೀಲರಿಗೆ ಗೌನ್ ವಿನಾಯಿತಿ

ಕೊಲ್ಕೊತಾ, ಏ. 19 – ಬೇಸಿಗೆ ಧಗೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ವಕೀಲರು ಗೌನ್ ಧರಿಸುವುದರಿಂದ ವಿನಾಯಿತಿ ನೀಡಲು ಕಲ್ಕತ್ತಾ ಹೈಕೋರ್ಟ್ ನಿರ್ಧರಿಸಿದೆ. ಕೊಲ್ಕೊತಾ ಹಾಗೂ ಸುತ್ತಲಿನ ಪ್ರದೇಶದಲ್ಲಿ ಬಿಸಿ ಗಾಳಿ ಬೀಸಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬಿಸಿಗಾಳಿಯ ಪರಿಸ್ಥಿತಿ ಪರಿಗಣಿಸಿ ಜೂನ್ 10ರವರೆಗೆ ಗೌನ್ ಧರಿಸುವುದರಿಂದ ಕಲ್ಕತ್ತಾ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಟಿ.ಎಸ್. ಶಿವಜ್ಞಾನಂ ಅವರು ವಿನಾಯಿತಿ ನೀಡಿದ್ದಾರೆ. ಕಳೆದ ವರ್ಷದ ಬೇಸಿಗೆಯಲ್ಲೂ ವಕೀಲರಿಗೆ ಗೌನ್‌ನಿಂದ ವಿನಾಯಿತಿ ನೀಡಲಾಗಿತ್ತು.

## ಮಂಡಿಪೇಟೆ ಶ್ರೀ ಕೋದಂಡರಾಮ ದೇವಸ್ಥಾನದ ಹೆಬ್ಬಾಗಿಲು ಇಡುವ ಶಾಸ್ತ್ರ



ದಾವಣಗೆರೆ, ಏ. 19 - ಇಲ್ಲಿನ ಮಂಡಿಪೇಟೆ ಶ್ರೀ ಕೋದಂಡರಾಮ ದೇವಸ್ಥಾನದ ಹೆಬ್ಬಾಗಿಲು ಇಡುವ ಶಾಸ್ತ್ರ, ಪೂಜೆಯನ್ನು ನೆರವೇರಿಸಲಾಯಿತು. ದೇವಸ್ಥಾನದ ಅಧ್ಯಕ್ಷರಾದ ಕಾಸಲ್ ನಾಗರಾಜ್ ಮತ್ತು ಕಾಸಲ್ ಬದರಿನಾಥ, ಕಾಸಲ್ ಅಮರ್ ನಾಥ್ ಮತ್ತಿತರರು ಉಪಸ್ಥಿತರಿದ್ದರು

## 23ಕ್ಕೆ ಹಳೇಪೇಟೆ ಶ್ರೀ ವೀರಭದ್ರೇಶ್ವರ ರಥೋತ್ಸವ



ದಾವಣಗೆರೆ, ಏ.19- ಹಳೇಪೇಟೆಯ ಶ್ರೀ ವೀರಭದ್ರೇಶ್ವರ ಸ್ವಾಮಿಯ ರಥೋತ್ಸವವು ನಾಡಿದ್ದು ದಿನಾಂಕ 21 ರ ಭಾನುವಾರದಿಂದ 24 ರವರೆಗೆ ನಡೆಯಲಿದೆ. ದಿನಾಂಕ 21 ರಂದು ಬೆಳಿಗ್ಗೆ 6 ಗಂಟೆಗೆ ರುದ್ರಾಭಿಷೇಕ ಮತ್ತು ಬೆಳಿಗ್ಗೆ 9 ಗಂಟೆಗೆ ರುದ್ರ ಸಂತರ್ಪಣೆ, ದಿನಾಂಕ 22 ರಂದು ಬೆಳಿಗ್ಗೆ 6 ಗಂಟೆಗೆ ಶ್ರೀ ವೀರಭದ್ರೇಶ್ವರ ಸ್ವಾಮಿಯ ಗುಗ್ಗಳ ಮತ್ತು ಅಗ್ನಿಕುಂಡ ಹಾಗೂ ಉತ್ಸವ ನಗರದ ರಾಜಬೀದಿಗಳಲ್ಲಿ ನಡೆಯುತ್ತದೆ.

ದಿನಾಂಕ 23ರ ಸಂಜೆ 7 ಕ್ಕೆ ಶ್ರೀ ವೀರಭದ್ರೇಶ್ವರ ಸ್ವಾಮಿಯ ರಥೋತ್ಸವ, ದಿನಾಂಕ 24 ರಂದು ರಾತ್ರಿ 8 ಕ್ಕೆ ಓಕುಳಿ ಉತ್ಸವ ನಡೆಯುತ್ತದೆ.


## ನಗರದಲ್ಲಿ ಇಂದು ಮಜ್ಜಿಗೆ ವಿತರಣೆ ಕಾರ್ಯಕ್ರಮ

ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಿಂದ ಒಂದು ತಿಂಗಳು ನಡೆಸುತ್ತಿರುವ ಮಜ್ಜಿಗೆ ವಿತರಣಾ ಕಾರ್ಯಕ್ರಮಕ್ಕೆ ಶ್ರೀಮತಿ ಶಕುಂತಲಾ ನಯನ ಅವರು ಇಂದಿನ ದಾನಿಗಳಾಗಿದ್ದಾರೆ. ಈ ಸತ್ಕಾರ್ಯಕ್ಕೆ ದಾನ ಮಾಡ ಬಯಸುವವರು ಶ್ರೀಮತಿ ಮಂಜುಳಾ ಬಸವಲಿಂಗಪ್ಪ (7483809312) ಅವರನ್ನು ಸಂಪರ್ಕಿಸಬಹುದು.

ಬೇಕಾಗಿದ್ದಾರೆ
ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ
ಶಾಂತಲಾ ದಿ ವೆಡ್ಡಿಂಗ್ ಮಾಲ್....
ಚಾಮರಾಜ ಪೇಟೆ, ದಾವಣಗೆರೆ. 9686195327


ಬೇಕಾಗಿದ್ದಾರೆ
ರವಿತೇಜ ಟೆಕ್ಸ್‌ಟೈಲ್ಸ್
ಬಟ್ಟೆ ಅಂಗಡಿಯಲ್ಲಿ ಅನುಭವವುಳ್ಳ ಸೇಲ್ಸ್ ಮೆನ್, ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
98803 82611

ಹುಟ್ಟುಹಬ್ಬದ ಶುಭಾಶಯಗಳು
ದಿನಾಂಕ 20.04.2024ರಂದು ತಮ್ಮ ಹುಟ್ಟುಹಬ್ಬದ ಸಂಭ್ರಮದಲ್ಲಿರುವ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರೂ, ಸೇಂಟ್ಸ್ ಜಾನ್ಸ್ ಶಾಲೆಯ ಮಹಾಪೋಷಕರೂ ಆದ
ಶ್ರೀ ಆರ್.ಎಸ್.ಶೇಖರಪ್ಪ
ಅವರಿಗೆ ಜನ್ಮ ದಿನದ ಹಾರ್ದಿಕ ಶುಭಾಶಯಗಳು. ಅವರಿಗೆ ಪರಮಾತ್ಮನು ಇನ್ನೂ ಹೆಚ್ಚಿನ ಆಯುರಾರೋಗ್ಯ ಭಾಗ್ಯವನ್ನು ನೀಡಿ, ಇನ್ನೂ ಹೆಚ್ಚಿನ ಸಮಾಜ ಸೇವೆ ಮಾಡುವ ಚೈತನ್ಯವನ್ನು ನೀಡಲಿ ಎಂದು ಶುಭ ಹಾರೈಸುತ್ತೇವೆ.



ಹೆಚ್. ಅನಿಲ್‌ಕುಮಾರ್ ಅಧ್ಯಕ್ಷರು
ಆರ್.ಎಸ್. ರಾಕೇಶ್ ಉಪಾಧ್ಯಕ್ಷರು
ಟಿ.ಎಂ. ಉಮಾಪತಯ್ಯ ಕಾರ್ಯದರ್ಶಿ
ಹೆಚ್.ಬಿ.ರಾಮಚಂದ್ರಪ್ಪ ಮಹಾಪೋಷಕರು
ಪ್ರವೀಣ್ ಹುಲ್ಲುಮನೆ ಖಜಾಂಚಿ
ಆರ್.ಹೆಚ್. ನಾಗಭೂಷಣ್ ನಿರ್ದೇಶಕರು
ಟಿ.ಎಂ.ಗಿರೀಶ್ ನಿರ್ದೇಶಕರು
ಕೆ. ಶ್ರೀನಾಥ್ ರೆಡ್ಡಿ ನಿರ್ದೇಶಕರು
ಪ್ರಾಂಶುಪಾಲರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗ
ಸೇಂಟ್ ಜಾನ್ಸ್ ಬ್ಯಾಪ್ಟಿಸ್ಟ್ ಎಜುಕೇಷನಲ್ ಅಸೋಸಿಯೇಷನ್ (ರಿ)
ಸೇಂಟ್ ಜಾನ್ಸ್ ಇಂಗ್ಲಿಷ್ ಮೀಡಿಯಂ ಸ್ಕೂಲ್
✦ ಸೇಂಟ್ ಜಾನ್ಸ್ ಕಾನ್ವೆಂಟ್ ಶಾಲೆ ✦ ಸೇಂಟ್ ಜಾನ್ಸ್ ಪಿಯು ಕಾಲೇಜ್
ಶ್ರೀ ಶಿವಕುಮಾರ ಸ್ವಾಮಿ ಬಡಾವಣೆ, ಹೆಚ್.ಆರ್.ಬಿ. ಲೇಔಟ್, ದಾವಣಗೆರೆ. ಫೋ : 08192-263426, 261292

BHADRA EDUCATION TRUST ®
BHADRA P.U. COLLEGE
COMMERCE: E.B.A.S / E.B.A.Cs.
Heartily congratulating our Star Performers II PUC Result 2023-24




Separate Hostel Facilities for Boys & Girls
ADMISSIONS OPEN FOR I PUC COMMERCE & SCIENCE
Free Admissions for above 95% in SSLC / CBSE BOARD EXAMS
BHADRA INSTITUTE OF MANAGEMENT & INFORMATION SCIENCE STUDIES (BIMS)
Spreading the light of knowledge since 2009
Special Features:
- Hands-on experienced faculty members.
- Industry visits, Futuristic Computer Lab
- Dynamic, High-Tech Learning environment.
- Coaching for CA-CPT, Tally & SAP.
- Training in 'Soft Skills', personality Development,
- Cultural Programs & sports.
- Career Counseling by experts.
- Food fest, Management Events
- Campus selections, Guest Lecturing and coaching for competitive exams.
- Seminars & Webinars
B.C.A. Bachelor of Computer Application
B.Com. Bachelor of Commerce
B.B.A. Bachelor of Business Administration
ADMISSIONS OPEN 2024-25
CA CPT SAP Tally



10th Cross, near Bhadra Bus Stop, BIET College Road, Siddaveerappa Badavane, Davangere-04.
9880445536, 8884440005

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas